Budget Estimates for 1970-71—Demand for Grants

Demand Nos. 9, 11 and 26

Sri K. PUTTASWAMY (Minister for Law, Labour and Parliamentary Affairs).—Sir, on the recommendation of the Governor, I beg to move :

"That a sum not exceeding Rs. 46,35,000 be granted to the Government to defray the charges which will come in course of payment during the financial year for the period ending 31st day of March 1971, in respect of 'Parliament, State/Union Territory Legislature'."

"That a sum not exceeding Rs. 1,82,65,000 be granted to the Government to defray the charges which will come in course of payment during the financial year for the period ending 31st day of March 1971, in respect of, 'Administration of Justice'."

And

"That a sum not exceeding Rs. 1,27,67,000 be granted to the Government to defray the charges which will come in course of payment during the financial year for the period ending 31st day of March 1971, in respect of 'Labour and Employment'."

Mr. SPEAKER.—Motion moved :

"That a sum not exceeding Rs. 46,35,000 be granted to the Government to defray the charges which will come in course of payment during the financial year for the period ending 31st day of March 1971, in respect of 'Parliament, State/Union Territory Legislature'."

"That a sum not exceeding Rs. 1,82,65,000 be granted to the Government to defray the charges which will come in course of payment during the financial year for the period ending 31st day of March 1971, in respect of 'Administration of Justice'."

And

"That a sum not exceeding Rs. 1,27,67,000 be granted to Government to defray the charges which will come in course of payment during the financial year for the period ending 31st day of March 1971, in respect of 'Labour and Employment'."

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನನ್ಮಾನ್ಯ ಸಭಾಪತಿಗಳೇ, 9, 11 ಮತ್ತು 26ನೇ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಇವತ್ತಿನ ದಿವಸ ಈ ಕಾರ್ಮಿಕರ ಬಗ್ಗೆ ಏನು ಕೇಳಿಕೆಯನ್ನು ಮಾನ್ಯ ಮಂತ್ರಿಗಳು ಇಟ್ಟಿದ್ದಾರೋ ಅದನ್ನು ಕೊಡಕೂಡದೆಂದು ನಕ್ಷ್ಪವಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇವತ್ತಿನದಿವಸ ಕಾರ್ಮಿಕ ಇಲಾಖೆಯಲ್ಲಿ ಸರಿಯಾದಂಥ ನೀತಿ ಧೋರಣೆ ಇವೆಲ್ಲವೂ

ಇದೆಯೇ ಎಂಬುದು ಸಂಶಯಾತ್ಮಕವಾದ ಪ್ರಶ್ನೆಯಾಗಿದೆ. ನಾನು ಹೋದ ಸಾರಿ ಮಾತನಾಡಿದಾಗಲೂ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರು ನಾನು ಹಿಂದೆ ಹೇಳಿದಂತೆ ಮತ್ತೆ ಪುನಃ ಹೇಳಿದರೆಂದು ಹೇಳಿದರು. ಹಿಂದೆ ಆ ರೀತಿಯಾಗಿ ನಾನು ಹೇಳಿದ್ದು ನಿಜವಾಗಿದ್ದರೆ ಕಳೆದ ಒಂದು ವರ್ಷದಲ್ಲಿ ಏನಾದರೂ ಬದಲಾವಣೆಗಳಾಗಿವೆಯೇ, ಅನುಕೂಲಗಳಾಗಿವೆಯೇ, ಅಥವಾ ಅವರ ಅಡ್ಮಿನಿಸ್ಟ್ರೇಷನ್ನಿನಲ್ಲಿ ಮತ್ತು ಅವರ ಧೋರಣೆಯಲ್ಲಿ ಏನಾದರೂ ತಿದ್ದುಪಡಿ ಮಾಡಿಕೊಂಡಿದ್ದಾರೆಯೇ ಎಂಬುದಾಗಿ ಯೋಚನೆಮಾಡುವುದಾದರೆ, ಯಾವ ರೀತಿಯಲ್ಲಿಯೂ ಏನೂ ತಿದ್ದುಪಡಿಯಾಗಿಲ್ಲ. ಅದಕ್ಕಿಂತಲೂ ಇನ್ನೂ ಪರಿಸ್ಥಿತಿ ಹದಗೆಡುತ್ತಿದೆ. ಈ ದಿನ ಈ ಇಲಾಖೆಗಳು ಇರುವುದು ನನಗೆ ತಿಳಿದಮಟ್ಟಿಗೆ ಕೈಗಾರಿಕೆ ಕ್ಷೇತ್ರಗಳಲ್ಲಿ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಮಧ್ಯೆ ಶಾಂತಿ ಮತ್ತು ಸೌಹಾರ್ದಯುತ ಸಂಬಂಧ ಉಂಟುಮಾಡುವುದಕ್ಕಾಗಿ. ಆ ರೀತಿ ಸೌಹಾರ್ದಯುತ ಸಂಬಂಧ ಇದೆಯೇ ಎಂದು ನೋಡಿದರೆ ಸರ್ಕಾರದವರು ಆ ದಿಸೆಯಲ್ಲಿ ಪ್ರಯತ್ನ ಮಾಡಿದ ಹಾಗೆ ಕಾಣುವುದಿಲ್ಲ. ಇವತ್ತಿನ ದಿವಸ ನಾವು ಇಲ್ಲಿ ಮಾತನಾಡುತ್ತಿರುವಾಗ ಬೆಂಗಳೂರು ನಗರದ ಕಾರ್ಪೊರೇಷನ್ನಿನ ಕಾರ್ಮಿಕರು ಅನಿರ್ದಿಷ್ಟ ಕಾಲ ಮುಷ್ಕರ ಮಾಡುತ್ತಾ ಇದ್ದಾರೆ. ಕಾರ್ಪೊರೇಷನ್ ಅಧಿಕಾರಿಗಳು ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವನ್ನು ಕೊಡದೆ ಕಾರ್ಮಿಕರಿಗೆ ವಂಚನೆ ಮಾಡುತ್ತಿದ್ದಾರೆ. ಇವತ್ತಿನ ದಿವಸ ಬೀದಿಯಲ್ಲಿ ಅವರು ಮೆರವಣಿಗೆ ಬರುತ್ತಿದ್ದಾರೆ. ಮಂತ್ರಿಗಳನ್ನು ಬಂದು ಅವರು ಕಾಣುತ್ತಿದ್ದಾರೆ. ಅನೇಕ ಕಾರ್ಖಾನೆಗಳ ಕಾರ್ಮಿಕರಲ್ಲಿ ಅತೃಪ್ತಿ ಉಂಟಾಗುತ್ತಿದೆ. ಕಳೆದ 2 ವರ್ಷಗಳಿಂದಲೂ ಕೆಲವು ಕಾರ್ಖಾನೆಗಳಲ್ಲಿ ಮುಷ್ಕರ ನಡೆಯುತ್ತಿದೆ. ಸಾಕಷ್ಟು ಕಾರ್ಮಿಕವರ್ಗದವರು ಈ ರೀತಿಯಾಗಿ ಮುಷ್ಕರ ಮಾಡುವುದಕ್ಕೆ ಅವಕಾಶ ಕೊಡುವುದು ನ್ಯಾಯವೇ? ಕಾರ್ಖಾನೆಗಳನ್ನು ಇವರು ಮುಷ್ಕರಗಳನ್ನು ಬೆಳೆಸುತ್ತಿದ್ದಾರೆಂದು ನಾನು ಹೇಳುತ್ತೇನೆ. ಇವರ ನೀತಿ ಸ್ಪಷ್ಟವಾಗಿಲ್ಲ. ಇಲಾಖೆಯ ನೀತಿಯೂ ಕೂಡ ಅಷ್ಟೇ. ಮಾನ್ಯ ಶ್ರೀ ಪುಟ್ಟಸ್ವಾಮಿಯವರ ನೀತಿ ಕಾರ್ಮಿಕರಿಗೆ ವಿರೋಧವಾದ ನೀತಿ. ಅದು ಕೈಗಾರಿಕೆಗಳ ಪ್ರಗತಿಗೂ ವಿರೋಧವಾಗಿದೆ. ಮಾಲೀಕರ ಪರವಾಗಿರುವ ನೀತಿ. ಅವರು ಈಗ ಏನು ಹೇಳುತ್ತಿದ್ದಾರೆಂದರೆ, ಇಲಾಖೆಗಳನ್ನು ಬಲಗೊಳಿಸಿದ್ದೇವೆಂದು. ಇವತ್ತು ಇಬ್ಬರು ಡೆಪ್ಯುಟಿ ಕಮಿಷನರ್, ಇಬ್ಬರು ಲೇಬರ್ ಕಮಿಷನರ್‌ಗಳು ಎಂಬುದಾಗಿ ಮಾಡಿದ್ದಾರೆ. ಈಗ ಅಧಿಕಾರಿಗಳನ್ನು ಜಾಸ್ತಿ ಮಾಡಿರುವುದರಿಂದ ಇವತ್ತು ಅವರು ಇಲಾಖೆಗಳನ್ನು ಬಲಗೊಳಿಸಿದ್ದೇವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಅದು ತಪ್ಪು. ಜಾಸ್ತಿ ಜನ ಅಧಿಕಾರಿಗಳು ಬೇಡವೆಂದು ನಾನು ಹೇಳುವುದಿಲ್ಲ. ನಾವೇ ಹಿಂದೆ ಇನ್ನೂ ಹೆಚ್ಚಿಗೆ ಅಧಿಕಾರಿಗಳನ್ನು ಮಾಡಬೇಕೆಂದು ಹೇಳಿದ್ದೆವು. ಬೇಕಾದಷ್ಟು ಡೆಪ್ಯುಟಿ ಲೇಬರ್ ಕಮಿಷನರ್‌ಗಳನ್ನು ಈಗ ನೇಮಕಮಾಡಿದ್ದಾರೆ. ಅಲ್ಲಿ ಕೆಲವರಿಗೆ ಮಾತ್ರ ಕೆಲಸವಿದೆ. ಇನ್ನು ಕೆಲವರಿಗೆ ಕೆಲಸವೇ ಇಲ್ಲ. ನನಗೆ ತಿಳಿದಿರುವ ಹಾಗೆ ಮೈಸೂರಿನಲ್ಲಿ ನಮ್ಮ ಅಸಿಸ್ಟೆಂಟ್ ಲೇಬರ್ ಕಮಿಷನರ್ ಸಾಹೇಬರಿಗೆ ಹೆಚ್ಚಿಗೆ ಕೆಲಸವೇ ಇಲ್ಲ. ಎರ್ನಾಕುಲಂನ ಹೊರೆಯನ್ನು ಒಬ್ಬ ಡೆಪ್ಯುಟಿ ಲೇಬರ್ ಕಮಿಷನರ್ ಮೇಲೆ ಹೊರಿಸಿದ್ದಾರೆ. ಅವರು ಬೆಂಗಳೂರಿನವರಾಗಿರುವುದರಿಂದ. ಅವರ ಮೇಲೆ ಎರ್ನಾಕುಲಂ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಕೆಲವು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಮತ್ತು ನ್ಯಾಯವಾದ ರೀತಿಯಲ್ಲಿ ಕಾರ್ಮಿಕರ ಬಗ್ಗೆ ವರ್ತಿಸುತ್ತಿದ್ದಾರೆ. ಇನ್ನು ಕೆಲವರು ಅವರ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಉಪಯೋಗಮಾಡುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ನನಗೆ ತಿಳಿದಿರುವ ಪ್ರಕಾರ ಅನೇಕ ಅಧಿಕಾರಿಗಳು ಇತ್ತೀಚೆಗೆ ಲಂಚಕ್ಕೆ ಕೈಯೊಡ್ಡುವ ಅಧಿಕಾರಿಗಳಾಗಿದ್ದಾರೆ. ಇನ್ನು ಹೆಚ್ಚು ಹೇಳುವುದಕ್ಕೆ ನಾನು ಈಗ ಹೋಗುವುದಿಲ್ಲ. ಕೆಲವು ಲೇಬರ್ ಇನ್‌ಸ್ಪೆಕ್ಟರುಗಳು ಲಂಚ ತೆಗೆದುಕೊಂಡಿರುವ ನಿದರ್ಶನಗಳನ್ನು ನಾನು ಕೊಡಬಲ್ಲೆ. ಇವತ್ತಿನದಿವಸ ವಿಶೇಷವಾಗಿ ಹಣವನ್ನು ತೆಗೆದುಕೊಂಡು ಮಾಲೀಕರ ಪರವಾಗಿರತಕ್ಕ ಅನೇಕ ಅಧಿಕಾರಿಗಳು ಈಗ ಇಲ್ಲಿ ಇದ್ದಾರೆ. ಆದರೆ ಎಲ್ಲ ಅಧಿಕಾರಿಗಳೂ ಆ ರೀತಿ ಇದ್ದಾರೆಂದು ನಾನು ಹೇಳುವುದಿಲ್ಲ. ಅವರಲ್ಲಿ ಕೆಲವರು ಒಳ್ಳೆಯವರೂ ಇದ್ದಾರೆ. ಅಂತಹ ಒಳ್ಳೆಯ ಅಧಿಕಾರಿಗಳ ಬಗ್ಗೆ ಸರಿಯಾದ ರೀತಿಯಲ್ಲಿ ಸಂರಕ್ಷಣೆ ಕೊಡುವುದರಲ್ಲಿ ಈ ಸರ್ಕಾರ ಇದೆಯೇ, ಇಲಾಖೆಗಳು ಇವೆಯೇ, ಮಂತ್ರಿಗಳು ಇದ್ದಾರೆಯೇ ಎಂದು ನೋಡಿದರೆ ಅದರಲ್ಲಿ ಏನೋ ರಾಜಕೀಯ ಇದೆ. ನನಗೆ ಮೊನ್ನೆ ದಿವಸ ಒಂದು ನಿದರ್ಶನ ಗೊತ್ತಾಯಿತು. ಆ ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕೆ. ಜಿ. ಎಫ್. ನಲ್ಲಿ ಒಬ್ಬ ಲೇಬರ್ ಇನ್‌ಸ್ಪೆಕ್ಟರ್ ಇದ್ದಾರೆ. ಆ ಇನ್‌ಸ್ಪೆಕ್ಟರು ಒಂದು ವರ್ಷದೊಳಗೆ 100 150 ಕೇಸನ್ ಪಿಡಿದು ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಅಲ್ಲಿ ಒಬ್ಬ ಪಟಿಂಗ ಸೂರಜ್ ಪ್ರೈಸ್ ಎಂದು ಇಟ್ಟುಕೊಂಡಿದ್ದಾನೆ. ಅದರ ಮಾಲೀಕರಾದಂಥ ಶ್ರೀಮಾನ್ ಪನ್ನಾಲಾಲ್ ಅವರ ಮೇಲೆ ಕೇಸ್ ಹಾಕಬೇಕಾಯಿತು. ಕಾರ್ಮಿಕರಿಗೆ ಬರಬೇಕಾದ ಸಂಬಳವನ್ನು 1-2-1962 ರಿಂದ ಕೊಟ್ಟಿಲ್ಲ. ಕೇಸ್ ಹಾಕಬೇಕೆಂದು ಪ್ರಯತ್ನ ಪಟ್ಟರೆ ಇದುವರೆಗೂ ಇನ್ನೂ ಸಾಧ್ಯವಾಗಿಲ್ಲ. ಪನ್ನಾಲಾಲರು ಹೋಗಿ ಮುಖ್ಯಮಂತ್ರಿಗಳಿಗೆ ಗೋಗರೆದರು.

Sri S. R. SHANMUGAM.—It is purely a lie.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಬಂದು ಚೀಫ್ ಮಿನಿಸ್ಟರ ಕಾಲು ಹಿಡಿದು ನೀವು ನಮಗೆ ಸಹಾಯ ಮಾಡದೆ ಹೋದರೆ, ಕೇಸು ಹಾಕುವುದನ್ನು ತಡೆಯದೆ ಹೋದರೆ ನಾವು ಇಂಡಿಕೇಟ್‌ಗೆ ಸೇರುತ್ತೇವೆ ಎಂದು ಹೇಳಿರುವುದಾಗಿ ತಿಳಿದು ಬಂದಿದೆ. ಇಂಡಿಕೇಟ್ ಸಿಂಡಿಕೇಟ್ ಮಧ್ಯದಲ್ಲಿ ಕೇಸ್ ಹಾಕುವುದಕ್ಕೆ ಆಗಲಲ್ಲ. ಕೆಲವರು ಮಾಲೀಕರ ಪರವಾಗಿರುವವರು ಇನ್ಫ್ಲೂಹೆಕ್ಷ್ ರನ್ನು ಹಿಡಿದು ಹೊಡೆದಿದ್ದಾರೆ ಎಂದು ಕೇಳಿದ್ದೇನೆ. ತಮಗೆ ಈಪ್ರೊತ್ಸಿನ ದಿವಸ ಒಬ್ಬ ಅಧಿಕಾರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯ ಇಲ್ಲದೆ ಹೋದರೆ ನಿಮ್ಮ ಅಧಿಕಾರಿಗಳನ್ನು ಯಾವ ರೀತಿ ತೃಪ್ತಿಪಡಿಸುತ್ತೀರೋ ನನಗೆ ಗೊತ್ತಿಲ್ಲ. ಸುಮ್ಮನೆ ಆಫೀಸರುಗಳನ್ನು ಜಾಸ್ತಿಮಾಡಿದರೆ ಸಾಲದು. ತಮ್ಮ ಧೋರಣೆಯಲ್ಲಿ ಕ್ರಮಬದ್ಧವಾದ ಮತ್ತು ಮೂಲಭೂತವಾದ ಬದಲಾವಣೆ ಆಗಬೇಕು. ಇಲ್ಲದಿದ್ದರೆ ಕಾರ್ಮಿಕರ ಮತ್ತು ಎಂಪ್ಲಾಯೀಸ್ ಮಧ್ಯೆ ಶಾಂತಿ ಇರುವುದಿಲ್ಲ.

ಇನ್ನು ಮೈನಾರಿಟಿ ಯೂನಿಯನ್ಸ್‌ನ್ನು ಸಪೋರ್ಟ್ ಮಾಡಿದ್ದೀರಿ, ಮೆಜಾರಿಟಿ ಯೂನಿಯನ್ಸ್‌ಗೆ ತಾವು ಬೆಂಬಲ ಕೊಡುತ್ತಾ ಇಲ್ಲ. ಮೆಜಾರಿಟಿ ಯೂನಿಯನ್ನು ಇದ್ದರೂ, ಮೈನಾರಿಟಿ ಯೂನಿಯನ್ಸ್ ಹೇಳಿದಹಾಗೆ ಕೇಳಬೇಕೆಂಬ ಮನೋಭಾವ ಶ್ರೀ ಪುಟ್ಟಸ್ವಾಮಿಯವರಿಗೆ ಇದೆ. ಆ ರೀತಿ ಅವರು ನಡೆದುಕೊಂಡಿರುವುದಕ್ಕೆ ಅನೇಕ ನಿದರ್ಶನಗಳು ಇವೆ. ಮೆಜಾರಿಟಿ ಯೂನಿಯನ್ಸ್ ಮತ್ತು ಅಖಿಲ ಭಾರತ ಟ್ರೇಡ್ ಯೂನಿಯನ್ ಇರುವ ಕಡೆ ಐ.ಎನ್.ಟಿ.ಯು.ಸಿ. ಇಲ್ಲದಿದ್ದರೆ, ಅದಕ್ಕೆ ಆಕ್ಸಿಜನ್ ಕೊಟ್ಟು ಬೆಂಬಲ ಕೊಟ್ಟು ಅದನ್ನು ಉಳಿಸಬೇಕು ಎನ್ನುವ ಮನೋಭಾವನೆ ಈ ಡಿಪಾರ್ಟ್‌ಮೆಂಟಿನಲ್ಲಿ ಮಾತ್ರವಲ್ಲ ಹೆಚ್ಚಿಗೆ ಕಾರ್ಮಿಕ ಮಂತ್ರಿಗಳಲ್ಲಿ ಇದೆ ಎಂದು ಅರೋಪಣಮಾಡಬೇಕಾಗಿದೆ. ಹಿಂದೂಸ್ಥಾನ್ ಮೆಷನ್ಸ್ ಟೂಲ್ಸ್ ಸಂಘದ ರೆಕಗ್‌ನಿಷನ್ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ, ಮಾನ್ಯ ಮಂತ್ರಿಗಳು ಉತ್ತರ ಹೇಳಿದರು, ಅದು ಹಾಗೆಯೇ ಮೂಲೆಯಲ್ಲಿ ಬಿದ್ದಿದೆ. ಅಲ್ಲಿ ಐ. ಎನ್. ಟಿ ಯು. ಸಿ. ಸಂಘ ಇದೆ, ಅದಕ್ಕೆ ಜನರ ಬೆಂಬಲ ಇಲ್ಲದೆ ಹೋದರೂ ಆಕ್ಸಿಜನ್ ಕೊಡುವುದಕ್ಕೆ ಹೊರಟಿದ್ದಾರೆ. ಎಷ್ಟು ಜನ ಬೆಂಬಲಿಗರಿದ್ದಾರೆ ಎಂದು ಸರ್ಕಾರದವರು ಮ್ಯಾನೇಜ್‌ಮೆಂಟಿನವರನ್ನು ಕೇಳಿದ್ದಾರೆ. ಮ್ಯಾನೇಜ್‌ಮೆಂಟಿನವರು ಕೊಟ್ಟಿರುವ ಅಂಕಿ ಅಂಶಗಳು ಸರಿಯಾದ ಅಂಕಿ ಅಂಶಗಳು ಅಲ್ಲ. ಅಂತೂ ಈ ಪ್ರಶ್ನೆ ಇದುವರೆಗೂ ತೀರ್ಮಾನವಾಗದೆ ಹಾಗೆಯೇ ಉಳಿದಿದೆ. ಭಾರತ ಎಲಾಕ್ಟ್ರಾನಿಕ್ ಎಂಪ್ಲಾಯೀಸ್‌ನವರು ಕಳೆದ 20 ವರ್ಷಗಳಿಂದ ರೆಕಾಗ್‌ನಿಷನ್‌ಗೆ ಪ್ರಯತ್ನ ಪಡುತ್ತಿದ್ದಾರೆ. ಮೈನೂರು ಎರೆಕ್ಟ್ರಿಕಲ್ ಇಂಡಸ್ಟ್ರೀಸ್ ಎಂಪ್ಲಾಯೀಸ್ ಕಳೆದ ನಾಲ್ಕು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಇದುವರೆಗೂ ಅವರಿಗೆ ರೆಕಗ್‌ನಿಷನ್ ಕೊಟ್ಟಿಲ್ಲ. ಕೈಗಾರಿಕೆಗಳಲ್ಲಿ ಅಶಾಂತಿ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋದಾಗ ಮೆಜಾರಿಟಿ ಯೂನಿಯನ್ಸ್ ಮೇಲೆ ಅವರು ಮೈನಾರಿಟಿ ಯೂನಿಯನ್ಸ್ ಹಿಂಸಾಕೃತ್ಯ ಮಾಡಿ ಗಲಾಟೆ ಮಾಡಿ ದಬಾವಣೆ ನಡೆಸುತ್ತಾರೆ ಎಂದು ಹೇಳುತ್ತಾರೆ. ಹಿಂದೂಸ್ಥಾನ್ ಮೆಷನ್ ಟೂಲ್ಸ್, ಭಾರತ್ ಎಲಕ್ಟ್ರಾನಿಕ್ಸ್, ಮೈನೂರು ಎರೆಕ್ಟ್ರಿಕಲ್ ಇಂಡಸ್ಟ್ರೀಸ್ ಇಲ್ಲಿ ಎಂಪ್ಲಾಯೀಸ್ ಯೂನಿಯನ್ ರೆಕಗ್‌ನಿಷನ್ ಮಾಡದೆ ಹಾಗೆಯೇ ಉಳಿದುಕೊಂಡರೆ ಹೋರಾಟ ಮಾಡದೆ ಹಿಂಸಾಕೃತ್ಯ ನಡೆಸದೆ ಏನು ಮಾಡಿಯಾರು ! ಎಂತಹ ನಾಯಕರು ಅದನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ, ತಮಗೂ ಸಾಧ್ಯವಾಗುವುದಿಲ್ಲ ಎಂದು ನಿಷ್ಟವಾಗಿ ಹೇಳುತ್ತೇನೆ. ತಮ್ಮ ಧೋರಣೆ ಏನು ? ಅದಷ್ಟು ದಿನ ತಳ್ಳಿಕೊಂಡು ಹೋಗಲಿ ಜನ ಬೆಂಬಲ ಯೂನಿಯನ್‌ಗೆ ಇದ್ದರೂ, ರೆಕಾಗ್‌ನಿಷನ್ ಬಾರದೆ ಬೇಜಾರು ಪಟ್ಟುಕೊಂಡು ಮೈನಾರಿಟಿ ಯೂನಿಯನ್ ಹೇಳಿದಹಾಗೆ ಕೇಳಬಹುದು ಮಾಲೀಕರ ಪರವಾಗಿ ಕೇಳಬಹುದು ಎಂಬ ಅಭಿಪ್ರಾಯ ಮಂತ್ರಿಗಳಿಗೆ ಇದ್ದ ಹಾಗೆ ಕಾಣುತ್ತದೆ. ಈ ರೀತಿ ಅಭಿಪ್ರಾಯ ಇಲ್ಲದೇ ಹೋದರೆ, ತಾವು ಸರಿಯಾದ ಶಾಸನವೊಂದನ್ನು ತರಬಹುದಾಗಿತ್ತು. ನ್ಯಾಷನಲ್ ಲೇಬರ್ ಕಮಿಷನ್‌ರವರು ಇದರ ಬಗ್ಗೆ ಕಟುವಾಗಿ ಹೇಳಿದ್ದಾರೆ. ಯಾವ ಯೂನಿಯನ್ ಇರಬೇಕೆಂದು ಬ್ಯಾಲೆಟ್ ಆಧಾರದ ಮೇಲೆ ನಿರ್ಧಾರ ಮಾಡಬಹುದು ಅಥವಾ ಬೇರೆ ಯಾವುದಾದರೂ ಪ್ರೊಸೀಜರ್ ಮೇಲೆ ನಿರ್ಧಾರ ಮಾಡಬಹುದು ಎಂದು ಹೇಳಿದ್ದಾರೆ. ಕಾರ್ಮಿಕರ ಮಂತ್ರಿಗಳು ಯಾವುದಾದರೂ ಪ್ರಗತಿಪರವಾಗಿ ನೀತಿಯನ್ನು ಅನುಸರಿಸುತ್ತಿದ್ದಾರೆಯೇ ಎಂದರೆ ಎಳ್ಳಷ್ಟೂ ಇಲ್ಲ. ಈ ಒಂದು ವಿಷಯದಲ್ಲಿ ನೆರೆ ರಾಜ್ಯವಾದ ಕೇರಳ ಅಥವಾ ಪಶ್ಚಿಮ ಬಂಗಾಳ ಈ ಪ್ರಶ್ನೆಯನ್ನು ಯಾವ ರೀತಿ ಬಗೆಹರಿಸಿದರು ಎಂದು ನೋಡಬೇಕು. ಆ ರೀತಿ ಮಾಡುವುದಕ್ಕೆ ತಾವು ಏಕೆ ತಯಾರಾಗಿಲ್ಲ ! ಬ್ಯಾಲೆಟ್ ಆಧಾರದ ಮೇರೆ ಯಾತಕ್ಕೆ ಈ ಸಮಸ್ಯೆಯನ್ನು ಪರಿಹರಿಸಕೂಡದು ? ಬಹುಶಃ ಹಾಗೆ ಮಾಡಿದರೆ ನಿಮ್ಮ ಐ.ಎನ್.ಟಿ.ಯು.ಸಿ. ಯೂನಿಯನ್ ಯಾವುದೂ ಇರುವುದಿಲ್ಲ ಎಂದು ಭಯ ಇರಬಹುದು. ನೀವು ಕುಮ್ಮಕ್ಕು ಕೊಡುತ್ತಾ ಇರುವ ಯೂನಿಯನ್ ಚುನಾವಣೆಯಲ್ಲಿ ಯಶಸ್ವಿಯಾಗದೆ ಇರಬಹುದು ಎನ್ನುವ ಭಯ ಇದ್ದಂತೆ ಕಾಣುತ್ತದೆ. ಈ

ದಿವಸ ಕಾರ್ಮಿಕರು ಸ್ಟ್ರೈಕ್ ಮಾಡಿದರೆ ಅದಕ್ಕೆ ನೀವೇ ಕಾರಣ. ಈ ಪ್ರಶ್ನೆಯನ್ನು ನೀವು ಮೊದಲೇ ಬಗೆಹರಿಸಿದ್ದರೆ ಎಂ. ಇ. ಐ. ನಲ್ಲಿ ಸ್ಟ್ರೈಕ್ ಆಗುತ್ತಾ ಇರಲಿಲ್ಲ. ಇನ್ನೊಂದು ವಿಚಾರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವಂತೂ ಯೂನಿಯನ್‌ಗೆ ರೆಕಾಗ್‌ನಿಷನ್ ಕೊಡಲು ಬ್ಯಾರೆಟ್ ಆಧಾರವನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಚೀಫ್ ಮಿನಿಸ್ಟರ್ ಅದನ್ನು ಒಪ್ಪಿಕೊಳ್ಳುತ್ತಾರೆ. ಒಂದು ಸಾರಿ ಚೀಫ್ ಮಿನಿಸ್ಟರ್ ಎಂ. ಇ. ಐ. ಕಾರ್ಮಿಕರೊಡನೆ ಮಾತನಾಡುವಾಗ ಸೆಕ್ರೆಟ್ರಿಯವರು ಇದ್ದರು. ಓಟಿನ ಮೇಲೆ ಯಾಕೆ ರೆಕಾಗ್‌ನಿಷನ್ ಮಾಡಬಾರದೆಂದು ಮುಖ್ಯ ಮಂತ್ರಿಗಳು ಕೇಳಿದರು. ಅವಕ್ಕೆ ಸೆಕ್ರೆಟ್ರಿಯವರು ಲೇಬರ್ ಕಮಿಷನರ್‌ರವರು ಹಾಗೆ ಹೇಳಿದ್ದಾರೆ ಹೀಗೆ ಹೇಳಿದ್ದಾರೆ ಎಂದು ಉತ್ತರ ಕೊಟ್ಟರು. ಪಂಚಾಯಿತಿ ಮತ್ತು ಮುನಿಸಿಪಾಲಿಟಿಗಳಲ್ಲಿ ಎಲೆಕ್ಷನ್ ಆಧಾರದ ಮೇಲೆ ತೀರ್ಮಾನವಾಗುವಾಗ ಈ ಒಂದು ಯೂನಿಯನ್‌ಗೆ ರೆಕಾಗ್‌ನಿಷನ್ ಕೊಡುವ ವಿಚಾರದಲ್ಲೂ ಯಾಕೆ ಆ ಆಧಾರದ ಮೇಲೆ ಇತ್ಯರ್ಥ ಮಾಡಕೂಡದು ಎಂದು ನಾನು ಕೇಳುತ್ತೇನೆ. ತಾವು ಹಾಗೆ ಮಾಡುತ್ತೀರಿ ಎನ್ನುವ ನಂಬಿಕೆ ಕೂಡ ಹೊರಟು ಹೋಗಿದೆ. ಆ ನಂಬಿಕೆಯನ್ನು ತಾವು ಉಳಿಸಿಕೊಳ್ಳಬೇಕೆಂದು ಇಚ್ಛಿಸುವುದಾದರೆ ಬ್ಯಾರೆಟ್ ಮೇಲೆ ಯೂನಿಯನ್‌ಗೆ ರೆಕಾಗ್‌ನಿಷನ್ ಕೊಡುವಂಥ ಒಂದು ಶಾಸನ ಮಾಡಿ. ಇಲ್ಲದೆ ಹೋದರೆ ನಿಮಗೆ ತರೆನೋವಿನ ಕೆಲಸವಾದರೆ ಈ ಕಾರ್ಮಿಕರ ಖಾತೆಯನ್ನು ಬೇರೆ ಮಂತ್ರಿಗಳಿಗೆ ಕೊಡಿ. ಯಾರು ಬೇಕಾದರೂ ಸರಿಯಾದ ತೀರ್ಮಾನ ಕೊಡುವ ಮಂತ್ರಿಗಳು ಬರಲಿ. ಮೊನ್ನೆ ಮೈಸೂರು ಮಿಲ್ಲಿನ ಲೇಬರ್ ಅಸೋಷಿಯೇಷನ್ ವಿಷಯದಲ್ಲಿಯೂ ಅನಂಬದ್ಧವಾದ ಉತ್ತರವನ್ನು ಕೊಟ್ಟು ಹಾರಿಕೆಯ ಮಾತನ್ನು ಹೇಳಿದಿರಿ. ಮೈಸೂರು ಮಿಲ್ಸ್ ಲೇಬರ್ ಅಸೋಷಿಯೇಷನ್‌ನ ರೆಕಗ್‌ನಿಷನ್ ಕ್ಯಾನ್ಸಲ್ ಮಾಡಲು ಕಾರಣ ಹಣಕಾಸಿನ ಬ್ಯಾರೆನ್ಸ್‌ಷೀಟ್ ಪಬ್ಲಿಷ್ ಮಾಡದೆ ಇರುವುದು ಎಂದು ಹೇಳಿದಿರಿ. ಇದಕ್ಕೆ ಯಾರು ಸೆಕ್ರೆಟರಿ ಎಂದು ತಕರಾರು ಬಂದು ಕೋರ್ಟಿನ ಮುಂದೆ ಹೋಗಿದೆ ಎಂದು ಹೇಳಿದಿರಿ. ಇದಕ್ಕೆ ಯಾರು ಸೆಕ್ರಟರಿ ಆಗಬೇಕು ಎನ್ನುವುದು ಕಾರಣ ಅಲ್ಲ. ಬಿಲ್ಡಿಂಗ್ ಮತ್ತು ಯೂನಿಯನ್ ಆಸ್ತಿ ಯಾರಿಗೆ ಸೇರಬೇಕು ಎನ್ನುವುದೇ ವಿವಾದಾಸ್ಪದವಾಗಿದೆ. ಯಾರು ಮೆಜಾರಟಿ ಇದ್ದಾರೋ ಅವರಿಗೆ ಟ್ರೇಡ್ ಯೂನಿಯನ್ ಆಕ್ಟ್ಸ್ ಬರುತ್ತದೆ.

1-30 P. M.

ಯಾವಾಗ ಯೂನಿಯನ್ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಯಿತೋ ಒಂದೇ ದಿವಸದಲ್ಲಿ ತಕರಾರು ಇದ್ದರೂ ಸಹ ಇನ್ನೊಂದು ಯೂನಿಯನ್ ನೀವು ರಿಜಿಸ್ಟರ್ ಮಾಡಿಸಿದಿರೇ ಇಲ್ಲವೇ ? ಯಾರು ಅಪ್ಲಿಕೇಷನ್ ಹಾಕಿದ್ದಾರೆ, ಯಾರು ಸೈನ್ ಮಾಡಿದ್ದಾರೆ, ಅವರು ಕಾರ್ಮಿಕರು ಹೌದೇ ಅಲ್ಲವೇ ಎಂಬುದನ್ನು ಯಾವ ಇನ್‌ಸ್ಪೆಕ್ಟರು ಹೋಗಿ ಪರಿಶೀಲನೆ ಮಾಡಿದ್ದಾರೆ? ಯಾರನ್ನು ಕೇಳಿದರೋ ಗೊತ್ತಿಲ್ಲ. ನನಗಂತೂ ಯಾರೂ ಕೇಳಲಿಲ್ಲ. ಅವರು ಯಾರನ್ನೂ ಕೇಳಲಿಲ್ಲ ಅಂತ ಅನ್ನುವುದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ. ಇವತ್ತು ಶ್ರೀರಾಮುಲು ಅವರು ಇಂಡಿಕೇಟ್‌ನಲ್ಲಿ ಇರಬಹುದು, ಆವತ್ತಿನ ದಿವಸ ಅವರನ್ನು ತಮ್ಮ ಕಡೆಗೆ ಉಳಿಸಿಕೊಳ್ಳುವದಕ್ಕೆ ಈ ಪ್ರಯತ್ನ ಮಾಡಿದಿರಿ. ಬೆನ್ನಿ ಮಿಲ್ಸ್ ಲೇಬರ್ ಅಸೋಸಿಯೇಷನ್ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆದದ್ದು ಇದೇ ಕಾರಣಕ್ಕಾಗಿ. ಕ್ಯಾನ್ಸಲ್ ಆದ ತಕ್ಷಣ ನಾರಾಯಣಸ್ವಾಮಿಯವರು ರಿಜಿಸ್ಟ್ರೇಷನ್‌ಗೆ ಅಪ್ಲಿಕೇಷನ್ ಹಾಕಿಕೊಂಡರು. ತಾವೇನು ಮಾಡಿದಿರಿ ? ಹಿಂದೆ ಅವರಿಗೆ ರಿಜಿಸ್ಟ್ರೇಷನ್‌ಗೆ ಅವಕಾಶ ಕೊಟ್ಟಮೇಲೆ ಇವರಿಗೂ ಕೂಡ ಕೊಡಬೇಕಾಗಿತ್ತು,, ಆದರೆ ಕೊಡಲಿಲ್ಲ. ಅದೇ ಹೆಸರಿನಲ್ಲಿ ರಿಜಿಸ್ಟ್ರೇಷನ್‌ಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಲೇಬರ್ ಕಮಿಷನರು ಹೇಳಿದರು. ಈ ರೀತಿ ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ. ಹೀಗೆ ಮಾಡುವುದಕ್ಕೆ ಕಾರಣವೇನು ? ಒಬ್ಬರು ನಿಮ್ಮ ಪರವಾಗಿರುವವರು, ನಿಮಗೆ ಬೇಕಾದವರು, ನಾರಾಯಣಸ್ವಾಮಿ ಅವರು ನಿಮಗೆ ವಿರುದ್ಧವಾಗಿದ್ದವರು. ಆದ್ದರಿಂದ ಇವರಿಗೆ ಕೊಡಲಿಲ್ಲ. ಇವತ್ತೂ ಕೂಡ ಇದು ಕೋರ್ಟ್ ಮುಂದೆ ಇದೆ ಅಂತ ಅನ್ನುವುದು ತಮಗೆ ಗೊತ್ತಿರಬೇಕು. ಇದು ಯಾವ ಪೀರಿಯಡ್‌ನಲ್ಲಾದದ್ದು ಅಂತ ಸರಿಯಾದ ಡೇಟ್ ಗೊತ್ತಿಲ್ಲ, 2-3 ವರ್ಷವಾಗಿರಬಹುದು. ತಾವು ನಾವು ಇದ್ದಾಗ ಇದು ಆಗಲಿಲ್ಲ ಅಂತ ಹೇಳಬಹುದು, ತಪ್ಪಿಸಿಕೊಳ್ಳಬಹುದು.

ಶ್ರೀ ಕೆ. ಪುಟ್ಟಸ್ವಾಮಿ—ತಪ್ಪಿಸಿಕೊಳ್ಳುವುದಕ್ಕಲ್ಲ, ಸರಿಯಾದ ತಾರೀಖು ಯಾವುದು ಅಂತ ಹೇಳಿದರೆ ವಿಚಾರ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಖಚಿತವಾದ ತಾರೀಖು ಗೊತ್ತಿಲ್ಲ, ತಮ್ಮ ಸೆಕ್ರೆಟೆರಿಯವರನ್ನು ಕೇಳಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ವಿಚಾರಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಒಬ್ಬರಿಗೊಂದು ಇನ್ನೊಬ್ಬರಿಗೊಂದು ರೀತಿ ತಾರತಮ್ಯ ತೋರಿಸುತ್ತಾ ಇರುವುದು ಸರಿಯಲ್ಲ. ಇದರಿಂದ ಖಂಡಿತ ಕೈಗಾರಿಕಾ ಶಾಂತಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಕೈಗಾರಿಕಾ ಶಾಂತಿ ಉಳಿಯಬೇಕಾಗಿದ್ದರೆ ಅದಕ್ಕೆ ನೀವು ಜವಾಬ್ದಾರರಾಗಿದ್ದೀರಿ ಎಂದು ಹೇಳಬಯಸುತ್ತೇನೆ.

ಇಂಡಸ್ಟ್ರಿಯಲ್ ರಿಲೇಷನ್‌ಷಿಪ್ ಕಮಿಟಿಗೆ ತಾವೇ ಚೇರ್ಮನ್‌ರಾಗಿದ್ದೀರಿ. ತಾವು ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ, ಏನೆಂದರೆ ಯಾವುದಾದರೂ ಎರಡು ಯೂನಿಯನ್‌ಗಳು ನಮ್ಮಿಳಿತವಾದ ಡಿಮ್ಯಾಂಡ್‌ಗಳನ್ನು ಕಳುಹಿಸಿದರೆ ಕನ್‌ಸಿಲಿಯೇಷನ್‌ಗೆ ಇಬ್ಬರನ್ನೂ ಕರೆಯಬೇಕೆಂದು ಮಾಡಿದ್ದೀರಿ. ಬಹಳ ಚರ್ಚೆಯಾಗಿ ಆಮೇಲೆ ನರ್ವಾನುವರ್ತದಿಂದ ಅಂಗೀಕಾರವಾದಂತಹ ಒಂದು ತೀರ್ಮಾನ ಇದು, ಇದು ತಮಗೆ ಗೊತ್ತಿದೆ. ಈ ತೀರ್ಮಾನ ಕಾರ್ಯಗತವಾಗಬೇಕೆಂಬ ಅಭಿಪ್ರಾಯ ತಮ್ಮಲ್ಲಿ ಇದೆ ಅಂತ ಹೇಳಿ ನಾನು ತಿಳಿದುಕೊಂಡಿದ್ದೇನೆ. ಇದು ಒಳ್ಳೆಯ ತೀರ್ಮಾನ, ಇದಕ್ಕೆ ನಾನು ವಿರೋಧಿ ಅಲ್ಲ. ಆದರೆ ಇದು ಕಾರ್ಯಗತವಾಗುತ್ತಾ ಇದೆಯೇ ಎಂದರೆ ಇಲ್ಲ. ಅದಕ್ಕೆ ಬದಲಾಗಿ ತಾವು ಇದನ್ನು ಕಾರ್ಯಗತ ಮಾಡದೇ ತಪ್ಪಿಸಿಕೊಳ್ಳುತ್ತಾ ಇದ್ದೀರಿ. ಇದರಿಂದ ಕಾರ್ಮಿಕರಿಗೆ ಹಾನಿಯಾಗಿದೆ. ಇದರಲ್ಲೂ ಕೂಡ ಪೊಲಿಟಿಕಿಂಗ್ ಅಂತ ಅನ್ನುವುದನ್ನು ಪಾಲಿಟ್ರಿಕಿಂಗ್ ಅಂತ ಹೇಳುತ್ತಾರೆ. ಎ.ಐ.ಟಿ.ಯು.ಸಿ.ಯವರು ಹಿಂದೂಸ್ತಾನ್ ಮೆಷೀನ್ ಟೂಲ್ಸ್‌ನಲ್ಲಿ ಡಿಮ್ಯಾಂಡ್‌ಗಳನ್ನು ಹಾಕಿ ಎರಡು ಮೂರು ವರ್ಷವಾಯಿತು. ಅಲ್ಲಿ ಒಂದು ಕಾರ್ಮಿಕರ ಸಂಘ ಇದೆ, ನಮ್ಮ ಸಂಘದವರೂ ಇದ್ದಾರೆ. ಇಬ್ಬರನ್ನೂ ಕರೆಯಬೇಕಾಗಿತ್ತು, ಚರ್ಚೆ ನಡೆಸಬೇಕಾಗಿತ್ತು, ಆಮೇಲೆ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಅದು ನರಿಹೋಗದೇ ಇದ್ದದ್ದರೆ ಕೋರ್ಟಿಗೆ ಹೋಗಬಹುದಾಗಿತ್ತು ಅದು ಮುಂದಿನ ಪ್ರಶ್ನೆ. ಇಲ್ಲಿ ಏನು ಮಾಡಿದರು ನಮ್ಮ ಯೂನಿಯನ್ ಅವರನ್ನು ಕರೆನಲೇ ಇಲ್ಲ. ಹಿಂದೂಸ್ತಾನ್ ಮೆಷೀನ್ ಟೂಲ್ಸ್ ಕಾರ್ಮಿಕರ ಸಂಘದವರನ್ನು ಕರೆಸಿ, ಕನ್‌ಸಿಲಿಯೇಷನ್ ನಡೆಸಿ, ಸೆಟ್ಲ್‌ಮೆಂಟ್ ಆಗುವ ಹಾಗುವ ಹಾಗೆ ಮಾಡಿದರು, ಇದು ನ್ಯಾಯವೇ ? ನಿಮ್ಮ ತೀರ್ಮಾನಕ್ಕೆ ನೀವೇ ವಿರೋಧವಾದರೆ ಯಾವ ರೀತಿ ನಿಮ್ಮಲ್ಲಿ ಕಾರ್ಮಿಕರು ನಂಬಿಕೆ ಇಡುವುದಕ್ಕೆ ಸಾಧ್ಯವಾಗುತ್ತದೆ ? ಯಾವ ರೀತಿ ಸೆಟ್ಲ್‌ಮೆಂಟ್ ಆಗಿದೆ ಎಂಬುದನ್ನು ನೋಡಿ. 7-1-70ರಲ್ಲಿ ಸೆಟ್ಲ್‌ಮೆಂಟ್ ಆಗಿರುವುದು. 5-1-70ರಲ್ಲಿ ನಾವು ಒಂದು ನೋಟೀಸ್ ಕಳುಹಿಸಿದ್ದೇವೆ. ಈ ರೀತಿ ಒಳಗಿಂದ ಒಳಗೆ ಒಪ್ಪಂದ ಮಾಡಿಕೊಳ್ಳಕೂಡದು, ಮಾಡಿಕೊಂಡರೆ ತೊಂದರೆಯಾಗುತ್ತದೆ ಇಬ್ಬರನ್ನೂ ಕರೆಸಿ ತೀರ್ಮಾನ ಮಾಡಬೇಕೆಂದು ಕಾಗದ ಬರೆದಿದ್ದೇವೆ ಅದಕ್ಕೆ ಉತ್ತರವೇ ಇಲ್ಲ. ಮೇಜರ್ ಇಷ್ಯೂ ಆದ ವೇಜಸ್ ಮತ್ತು ಡಿ.ಎ. ವಿಷಯದಲ್ಲಿ ಈ ರೀತಿ ಒಂದು ದಿವಸದಲ್ಲಿ ಕನ್‌ಸಿಲಿಯೇಷನ್, ಸೆಟ್ಲ್‌ಮೆಂಟ್ ಮಾಡಿರುವುದು ಸರಿಯಲ್ಲ. ಈ ಪ್ರಶ್ನೆಯನ್ನು ನಮ್ಮ ಯೂನಿಯನ್‌ರವರು ಯಾವಾಗ ಎತ್ತಿದರೋ ಆಗ ಅವರಿಗೆ ಕೋಪ ಬಂದು ರಾಜಗೋಪಾಲ್ ಮತ್ತು ವೆಂಕಟೇಶ ಅಂತ ಅನ್ನುವವರನ್ನು ಟರ್ಮಿನೇಟ್ ಮಾಡಿದರು. The services of the Assistant Secretary were terminated on grounds of inefficiency, so that they could buttress the Karmik Sangh which is a minority union. This is far from the original understanding. ಇದಕ್ಕೆ ತಾವೇ ಕಾರಣಕರ್ತರು. ತಾವು ಫರ್ಮ್ ಆಗದಿದ್ದರೆ ಈ ಪ್ರಶ್ನೆ ಬರುತ್ತಲೇ ಇರಲಿಲ್ಲ. ಶ್ರೀಮಾನ್ ಟಿ. ಸುಬ್ರಮಣ್ಯರವರು ಇದ್ದಾಗ, ದೇವರಾಜ ಅರಸ್‌ರವರು ಇದ್ದಾಗ ಇದೇ ತರಹ ಪ್ರಶ್ನೆ ಬಂತು ಪ್ಲಾಂಟೇಷನ್ ಕಾರ್ಮಿಕರ ಪ್ರಶ್ನೆ ಬಂದಾಗ ನತ್ಯಾಜಿರಾವ್ ಅನ್ನುವವರು ಪ್ಲಾಂಟೇಷನ್ ಕಾರ್ಮಿಕರ ಸಂಘ ಮತ್ತು ಎ.ಐ.ಟಿ.ಯು.ಸಿ.ಯ ಎಲ್ಲರನ್ನೂ ಕರೆಸಿಕೊಂಡು, ಎಲ್ಲರಿಗೂ ಮರ್ಯಾದೆ ಕೊಟ್ಟು ಸೆಟ್ಲ್‌ಮೆಂಟ್ ಮಾಡಿದರು. ಅಂತಹ ಒಂದು ಧೋರಣೆಯನ್ನು ತಾವು ಅನುಸರಿಸದೇ ಇರುವುದು ಸರಿಯಲ್ಲ ಎಂದು ಹೇಳಬೇಕಾಗಿದೆ. ಮೈಸೂರು ಕೆ.ಆರ್. ಮಿರ್ಸ್ ಮತ್ತು ಮಿನರ್ವ ಮಿರ್ಸ್ ಮುಚ್ಚಿರುವುದರಿಂದ 6 ಸಾವಿರ ಜನ ಹೊರಗೆ ಬಂದಿದ್ದಾರೆ. ಅಲ್ಲ ಏನು ಧೋರಣೆ ತಾಳಿದ್ದೀರಿ ? ಪ್ರತಿಸಲ ಕೇಳಿದಾಗ ಏನು ಮಾಡುವುದಕ್ಕಾಗುತ್ತದೆ, ಅಲ್ಲಿನ ಮಾಲೀಕರು ಮೋಸ ಮಾಡಿದ್ದಾರೆ, ದುಡ್ಡು ತಿಂದಿದ್ದಾರೆ, ತಿಂದು ನಾವು ಅವರಿಗೆ ಹಣ ಕೊಡುವುದಕ್ಕೆ ತಯಾರಾಗಿಲ್ಲ ಎಂದು ಹೇಳುತ್ತೀರಿ.

ಶ್ರೀ ಕೆ. ಪುಟ್ಟಸ್ವಾಮಿ.—ದುಡ್ಡು ತಿಂದಿದ್ದಾರೆ ಅಂತ ನಾವು ಹೇಳಿಲ್ಲ, ಬೇಕಾದರೆ ನೀವು ಹೇಳಿ ಅದಕ್ಕೇನೂ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಿಸ್‌ಮ್ಯಾನೇಜ್‌ಮೆಂಟ್ ಆಗಿದೆ ದುಡ್ಡು ತಿಂದು ಹಾಕಿದ್ದಾರೆ ಅಂತ ಅನ್ನುವುದನ್ನು ತಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಅದು ಬೇರೆ ಪ್ರಶ್ನೆ. ಮಹಾರಾಷ್ಟ್ರದಲ್ಲಿ ಇಂತಹ ಮಿಲ್‌ಗಳನ್ನು ಕೆಗೆದುಕೊಂಡು ಅವರು ನಡೆಸಲಿಲ್ಲವೇ? ಅದೇ ರೀತಿ ನೀವೂ ಕೂಡ ಧೈರ್ಯ ಇದ್ದರೆ ನಡೆಸುವ ಪ್ರಯತ್ನ ಮಾಡಬೇಕು. ಚೀಫ್ ಮಿನಿಸ್ಟರು ಅವರನ್ನು ಕೇಳಿದರೆ ಹೇಗ್ರಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದರೆ ಗುಲ್ಬರ್ಗದಲ್ಲಿರುವ ಎಂ.ಎಸ್.ಕೆ. ಮಿಲ್ಸ್ ಆದಂತೆ ಆಗುತ್ತದೆ ಎಂದು ಹೇಳಿದರು. ಐ.ಎ.ಎಸ್. ಅಧಿಕಾರಿಗಳು ಎಲ್ಲರೂ ಅಧಕ್ಷರು ಅಂತ ಹೇಳುವುದಕ್ಕಾಗುವುದಿಲ್ಲ, ದಕ್ಷರಾದವರು ಇದ್ದಾರೆ, ಟೆಕ್ಸ್‌ಟೈಲ್ ಇಂಡಸ್ಟ್ರೀನಲ್ಲಿ ಚೆನ್ನಾಗಿ ಗೊತ್ತಿರುವವರು ಇದ್ದಾರೆ, ಅವರಿಗೆ ಕಾರ್ಮಿಕರು ಸಹಕಾರ ಕೊಡುತ್ತಾರೆ. 6 ಸಾವಿರ ಜನರ ನಮ್ಮ ಸೈಯನ್ನು ಬಗೆಹರಿಸವಿದ್ದರೆ ಅವರ ಗತಿ ಏನು?

ಇನ್ನು ರೆಫರೆನ್ಸ್ ಬಗ್ಗೆ ಹೇಳಬೇಕೆಂದರೆ ಟೆಕ್ಸ್‌ಟೈಲ್ ಇಂಡಸ್ಟ್ರೀ ಯಾವುದೇ ವೇಜ್ ಬೋರ್ಡ್ ಮುಂದೆ ಇದ್ದರೆ ಅದನ್ನು ರೆಫರ್ ಮಾಡುವುದಿಲ್ಲ ಎಂಬ ಘೋರಣೆಯನ್ನು ಹೇಳುತ್ತೀರಿ. ಆ ಆಧಾರದ ಮೇಲೆ ದಾವಣಗೆರೆ ಕಾಟನ್ ಮಿಲ್ಸ್‌ನ್ನು ರೆಫರ್ ಮಾಡಿಲ್ಲ, ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್ಸ್‌ನ್ನು ರೆಫರ್ ಮಾಡಿಲ್ಲ, ಕೆ.ಆರ್. ಮಿಲ್ಸ್ ಮತ್ತು ಮಿನರ್ವ ಮಿಲ್ಸ್‌ನ್ನು ರೆಫರ್ ಮಾಡಿದ್ದೀರಿ. ಇಲ್ಲಿರತಕ್ಕ ವರ್ಡಿಂಗ್ಸ್ ನೋಡಿ, ಎಕ್ಸಾಮಿನ್ ಮಾಡಿ. ಅಲ್ಲಿ ಏಕೆ ರೆಫರ್ ಮಾಡಲಲ್ಲ ಇಲ್ಲಿ ಏಕೆ ರೆಫರ್ ಮಾಡಿದಿರಿ? ದಾವಣಗೆರೆ ಕಾಟನ್ ಮಿಲ್ಸ್ ಕಾರ್ಮಿಕರನ್ನು ಎಮರಿಸುವ ಧೈರ್ಯ ನಮಗೆ ಇಲ್ಲ. ನಿಜಲಿಂಗಪ್ಪನವರು ಇರುವ ಜಾಗ ಅದು. ಆದ್ದರಿಂದ ಈ ಪರಿಸ್ಥಿತಿ ಬಂದಿದೆ. ಹೀಗಿರುವಾಗ ಕೈಗಾರಿಕಾ ಶಾಂತಿ ಎಲ್ಲಿ ಇರುತ್ತದೆ? ಅಶಾಂತಿ ಬರದೇ ಇರುತ್ತದೆಯೇ ಎಂಬುದನ್ನೂ ಕೂಡ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ವೇಜ್ ಬೋರ್ಡ್ ವಿಚಾರ ತೆಗೆದುಕೊಂಡರೆ ಇಂಜನಿಯರಿಂಗ್ ಮತ್ತು ಟೆಕ್ಸ್‌ಟೈಲ್ ಎರಡಕ್ಕೂ ಎರಡು ಕಮಿಟಿಗಳನ್ನು ಮಾಡಿದ್ದಾರೆ. ಟೆಕ್ಸ್‌ಟೈರ್‌ನವರು ಡಿ. ಎ. ಕೊಡಬೇಕೆಂದು ಒಂದು ಪ್ರಶ್ನೆ ಎತ್ತಿದ್ದಾರೆ. ಅದು ಜಸ್ಟಿಫೈಯಲ್ಲದೆ. ಅವರು ಪತ್ರ ಕಳಿಸಿದ್ದಾರೆ, ಈ ವಿಚಾರ ಇತ್ಯರ್ಥ ವಾಗುವುದು ನಿಧಾನವಾಗುತ್ತಿದೆ. ಮೂರು ತಿಂಗಳಲ್ಲಿ ವೇಜ್ ಕಮಿಟಿ ತೀರ್ಮಾನ ಮಾಡಬೇಕು, ಅಭಿಪ್ರಾಯ ನೀಡಬೇಕು ಎಂದಿದೆ. ಆದರೆ ಏನಾದರೂ ಆಗಿದೆಯೇ ಎಂದರೆ ಏನೂ ಇಲ್ಲ. ಯೋಗ್ಯತೆ ಇಲ್ಲದ ಕೆಲವು ವ್ಯಕ್ತಿಗಳನ್ನು ಆ ಕಮಿಟಿಗಳಿಗೆ ಹಾಕಿದ್ದಾರೆ, ಕಾರ್ಮಿಕರಿಗೆ ಅನುಕೂಲ ವಾಗಬಾರದು ಎಂದು ಅದಕ್ಕೆ ತಕ್ಕಂಥ ವ್ಯಕ್ತಿಗಳನ್ನು ನೋಡಿ ಹಾಕಿವ್ವಾರೆ.

ಕಡೆಯದಾಗಿ ರೆಜಿಸ್ಟ್ರೇಷನ್ ಯಾವುದೂ ಹೊಸದಾಗಿ ತಾವು ಮಾಡಿಲ್ಲ, ರೇಬರ್ ಇರಾಖೆಗೆ ಸಂಬಂಧಪಟ್ಟಂತೆ ಯಾವುದನ್ನೂ ಮಾಡಿಲ್ಲ. ಹೊಸ ಕಾನೂನು ಯಾವುದನ್ನಾದರೂ ಮಾಡಿದ್ದೀರಾ ಎಂದು ಕೇಳಿದರೆ ಯೋಚನೆ ಮಾಡುವುದಾಗಿ ಹೇಳುತ್ತೀರೇ ಹೊರತು ಯಾವುದೂ ಮಾಡಿಲ್ಲ. What is the new legislation the Government have got? Why does he not think of bringing legislation beneficial to the working class? He is incapable of thinking of such measures. ಮಿನಿಮಂ ವೇಜಸ್ ಆಕ್ಟನ್ನು ಕೇರಳದವರು ಮತ್ತು ಪಶ್ಚಿಮ ಬಂಗಾಳದವರು ಜಾರಿಗೆ ತಂದು ಎಲ್ಲರಿಗೂ ಕೊಡುವಂತೆ ಮಾಡಿದರು. ಆದರೆ ಅಲ್ಲಿ ಕಮ್ಯುನಿಸ್ಟ್ ಸರ್ಕಾರವಿದೆಯೆಂದು ತಾವು ಹೇಳಬಹುದು. ಮಹಾರಾಷ್ಟ್ರದಲ್ಲಿ ಅನ್‌ಸ್ಕಿಲ್ಡ್ ವರ್ಕರ್ಸ್‌ಗೆ ಕೂಡ ಮಿನಿಮಂ ವೇಜಸ್ ನಿಗದಿಮಾಡಲು ಬಿಲ್ಲನ್ನು ತಂದರು. ಪಂಜಾಬಿನವರು ಮಿನಿಮಂ ವೇಜಸ್‌ನ್ನು ಡಿ.ಎ.ಗೆ ಲಿಂಕ್ ಮಾಡಬೇಕೆಂದಿದ್ದಾರೆ. ಅಲ್ಲಿ ಸಹ ಕಾಂಗ್ರೆಸ್ ಸರಕಾರ ಇದೆ. ಆ ರೀತಿ ಕೂಡ ತಾವು ಇಲ್ಲಿ ಮಾಡಿಲ್ಲ. ಹೀಗಾದರೆ ಹೇಗೆ ಅನುಕೂಲವಾದೀತು? ನೂರಾರು ಕೇಸುಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ನಾಲ್ಕೈದು ವರ್ಷಗಳಿಂದ ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವ ಕೇಸುಗಳ ಬಗ್ಗೆ ಏನು ಮಾಡುತ್ತೀರೆಂಬುದನ್ನು ಸ್ಪಷ್ಟವಾಗಿ ಈಗಲಾದರೂ ಹೇಳಿ.

ಕಡೆಯದಾಗಿ ಒಂದು ವಿನಂತಿ ಮಾಡುವುದು ಇಂದು ಸಿದ್ಧವೀರಪ್ಪನವರು ಹೇಳುವ ಹಾಗೆ ಇರುವ ಪ್ರಶ್ನೆ ಬಗೆಹರಿಸಬೇಕಾದರೆ ಪಾಲಿಟಿಕಿಂಗ್ ಮಾಡುತ್ತಿದ್ದಾರೆ. ಇದು ಸುಲಭವಾಗಿ ಹೋಗುವುದಿಲ್ಲ. ತಮ್ಮ ಕೈಲಾಗದಿದ್ದರೆ ರೇಬರ್ ಪೋರ್ಟ್‌ಫೋಲಿಯೋ ಬೇರೆಯವರಿಗೆ ಕೊಡಿ. ಹಿಂದೆ ಎಂ. ಪಿ. ರಾಮರಾಯರಿಗೆ ಹೋಂ ಮತ್ತು ರೇಬರ್ ಎರಡು ಇರಾಖೆಗಳಿದ್ದವು. ಆಗ ಎಷ್ಟೋ ಚೆನ್ನಾಗಿತ್ತು. ದೇವರಾಜ ಅರಸ್‌ರವರ ಕೈಲಿದ್ದಾಗಲೂ ಚೆನ್ನಾಗಿತ್ತು. ಈಗ ನಾರಾಯಣ್ ಮಂತ್ರಿಗಳಿದ್ದಾರೆ, ಸರಿಯಾದ ಕೆಲಸವಾಗುತ್ತಿಲ್ಲ. ಇದು ಸರಿಯಲ್ಲ ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ಈಗ ಈ ಮನೆಯ ಮುಂದಿರುವ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ತುಕೋಳ್ ಕಮಿಷನ್ ವರದಿ ಪ್ರಕಾರ ಜ್ಯುಡಿಷಿಯಲ್ ಆಫೀಸರುಗಳಿಗೆ ಒಳ್ಳೆಯ ಪಗಾರ ಕೊಟ್ಟಿದ್ದೀರಿ, ಮುನ್ಸೀಫರಿಗೆ 400—950, ಸಿವಿಲ್ ಜಡ್ಜ್‌ಗಳಿಗೆ 700—1,100, ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ 1,300—1,800 ಈ ರೀತಿ ಗ್ರೇಡು ಮಾಡಿರುವುದು ಒಳ್ಳೆಯದು. ಇದಕ್ಕಾಗಿ ಅಭಿನಂದಿಸುತ್ತೇನೆ. ಏಕೆಂದರೆ ಉಳಿದ ಸರಕಾರಿ ಅಧಿಕಾರಿಗಳ ಹಾಗೆ ಜ್ಯುಡಿಷಿಯಲ್ ಆಫೀಸರುಗಳು ಚಳವಳಿ ಮಾಡುವುದಕ್ಕಾಗುವುದಿಲ್ಲ, ಅವರು ತಮ್ಮ ಬೇಡಿಕೆಗಳನ್ನು ಸೌಮ್ಯ ರೀತಿಯಿಂದ ಹೈಕೋರ್ಟಿನ ಮುಂದೆ ಮಂಡಿಸಬೇಕು, ಅದನ್ನು ತಿಳಿದು ಅವರಿಗೆ ಸರಕಾರದವರು ಒಳ್ಳೆಯ ಗ್ರೇಡನ್ನು ಕೊಟ್ಟಿದ್ದಾರೆ. ಆದರೆ ಒಂದು ಮಾತನ್ನು ಈ ಸಮಯದಲ್ಲಿ ಹೇಳುವುದು ಅತ್ಯಂತ ಅವಶ್ಯಕ. ಸರಕಾರದವರು ಪೋಲೀಸು ಕಾನ್‌ಸ್ಟೇಬಲ್ಲುಗಳಿಗೆ ಮನೆಗಳನ್ನು ಕಟ್ಟಿಕೊಡುತ್ತಿದ್ದಾರೆ. ಲೇಬರರ್ಸ್‌ಗೂ ಕಟ್ಟಿಸುತ್ತಿದ್ದಾರೆ. ಅನೇಕ ಕಡೆ ಸರಕಾರಿ ನೌಕರರಿಗೂ ಈ ಸೌಕರ್ಯ ಮಾಡಿ ಕೊಡುತ್ತಿದ್ದಾರೆ. ಇದಕ್ಕೆ ನಾವು ಹೆಚ್ಚಿನ ಬೆಂಬಲ ಕೊಡಬೇಕು. ಆದರೆ ಜ್ಯುಡಿಷಿಯಲ್ ಆಫೀಸರುಗಳ ಸಲುವಾಗಿ ಕ್ವಾರ್ಟರ್ಸ್ ಕಟ್ಟಿಸಬೇಕೆಂದು ಹೈಕೋರ್ಟು ಮೇಲಿಂದಮೇಲೆ ಸಲಹೆ ಮಾಡುತ್ತಿದ್ದರೂ ದುರ್ದೈವದಿಂದ ಸರಕಾರ ಈ ಸಂಬಂಧದಲ್ಲಿ ಸೂಕ್ತ ಕ್ರಮ ಕೈಗೊಂಡಿಲ್ಲ. ಹುಬ್ಬಳ್ಳಿ, ಬೆಳಗಾವಿ ಮತ್ತು ಬೆಂಗಳೂರು ಮುಂತಾದ ನಗರಗಳಲ್ಲಿ ಜ್ಯುಡಿಷಿಯಲ್ ಆಫೀಸರುಗಳು ಕೆಲಸ ಮಾಡಲು ಬಂದಾಗ ಮನೆಗಳಿಗಾಗಿ ಅವರು ಪಡುವ ಪಾಡನ್ನು ನೋಡಬೇಕು. ಅನೇಕ ಕಡೆ ಸ್ಟೇಷನ್ ರೂಮುಗಳಲ್ಲಿ, ಟ್ರಾವಲರ್ಸ್ ಬಂಗಲೆಗಳಲ್ಲಿ ತಂಗಬೇಕಾಗುವುದು, ತಿಂಗಳುಗಟ್ಟಲೆ ಯಾದರೂ ಮನೆ ದೊರೆಯದೆ ಅವರು ಎಲ್ಲೋ ಇದ್ದುಕೊಂಡು ಅಪಹಾಸ್ಯಕ್ಕೆ ಗುರಿಯಾಗಬೇಕಾಗಿ ಬರುವ ಪ್ರಸಂಗಗಳು ಅನೇಕ ಇವೆ. ಇವರ ಪರಿಸ್ಥಿತಿ ಬಹಳ ನಾಜೂಕಾಗಿದೆ. ಪ್ರಜಾಪ್ರಭುತ್ವ ದಲ್ಲಿ ಪ್ರಜೆಗಳ ಹಕ್ಕುಬಾಧ್ಯತೆಯನ್ನು ಕಾಪಾಡುವ ಇಂಥ ಅಧಿಕಾರಿಗಳಿಗೆ ತಕ್ಕ ವನತಿ ಸೌಕರ್ಯ ಮಾಡಿಕೊಡದಿದ್ದರೆ ಬಹಳ ಕಷ್ಟವಾಗುವುದು. ಕೆಲವರು ಮನೆ ಬಾಡಿಗೆಗೆ ಕೊಡುವರು. ಆದರೆ ಕೆಲವುವೇಳೆ ಮನೆ ಮಾಲೀಕನ ದಾವೆ ಬಂದು ಅವರು ಒಂದು ತಿಂಗಳಲ್ಲೇ ಬಡಬೇಕಾಗುವುದು, ಹೀಗೆ ಅವರಿಗೆ ನಾನಾ ತೊಂದರೆಗಳಿವೆ. ಆದುದರಿಂದ ಸರಕಾರದವರು ಜ್ಯುಡಿಷಿಯಲ್ ಆಫೀಸರು ಗಳ ಮರ್ಯಾದೆ ಉಳಿದು ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಎಲ್ಲ ಕೋರ್ಟ್ ಇದೆಯೋ ಅಲ್ಲಿ ಕ್ವಾರ್ಟರ್ಸ್ ಕಟ್ಟಿಸುವ ವ್ಯವಸ್ಥೆಯನ್ನು ತೀವ್ರವಾಗಿ ಮಾಡಬೇಕು ಎಂದು ಸೂಚಿಸುತ್ತೇನೆ.

ಮಾನ್ಯ ಕಾಯ್ದೆ ಮಂತ್ರಿಗಳು ಉತ್ತಮ ವಕೀಲರೆಂದು ಕೇಳಿದ್ದೇನೆ. ಅವರು ಕೋರ್ಟಿನ ಕೆಲಸಕಾರ್ಯಗಳು ಉತ್ತಮ ರೀತಿಯಲ್ಲಿ ನಡೆಸಲು ವ್ಯವಸ್ಥಿತ ಸೌಕರ್ಯ ಮಾಡಿಕೊಡಬೇಕು. ಕೋರ್ಟಿಗೆ ಉತ್ತಮವಾದ ರೈಬ್ರರಿ ಬೇಕು, ಸ್ಟೇಷನರಿ ಸೌಕರ್ಯ ಬೇಕು. ಆದರೆ ನನಗೆ ತಿಳಿದ ಹಾಗೆ ಎಲ್ಲಾ ಕೋರ್ಟುಗಳಿಗೂ ಪುಸ್ತಕಗಳನ್ನು ಹೊರೆಹೊರೆಯಾಗಿ ಕಳಿಸಿದ್ದಾರೆ. ಅವನ್ನೆಲ್ಲಾ ಒಂದು ಕಡೆ ಡಂಪ್ ಮಾಡಿದ್ದಾರೆ. ಇದರಿಂದ ಅವು ನಿರುಪಯುಕ್ತವಾಗಿವೆ. ಅಲ್ಲದೆ ಉಪ ಯೋಗಕ್ಕೆ ಬರುವಂಥ ಪುಸ್ತಕಗಳು ಕಡಮೆ ಇವೆ. ಅದನ್ನು ಸರಿಯಾಗಿಡಲು ತಕ್ಕ ಸೌಕರ್ಯವಿಲ್ಲ. ಪುಸ್ತಕಗಳನ್ನಿಡಲು ಸರಿಯಾದ ಕೊಠಡಿಯಾಗಲ, ಇತರ ಉಪಕರಣಗಳಾಗಲು ಇಲ್ಲ. ಇದರಿಂದ ಎಷ್ಟೋ ಕಡೆ ಕಳಿಸಿರುವ ಪುಸ್ತಕಗಳ ಗಂಟನ್ನೇ ಬಿಚ್ಚಿಲ್ಲ. ಈ ರೀತಿ ಉದಾಸೀನ ಮಾಡುವುದು ಸರಿಯಲ್ಲ. ಯಾವಾಗ ಕಾಯ್ದೆ ಪುಸ್ತಕಗಳನ್ನೊದಗಿಸುವಿರೋ ಆಗ ಸರಿಯಾದ ಕಟ್ಟಡ, ಬೇಕಾದ ಸ್ಟೇಷನರಿ ಒದಗಿಸುವುದು ಅವಶ್ಯಕ. ಇದಕ್ಕೆ ತಕ್ಕ ಕೊಠಡಿಗಳನ್ನು ಕಟ್ಟಿಸಿ ಲೈಬ್ರರಿಗೆ ಸರಿಯಾದ ವ್ಯವಸ್ಥೆ ಮಾಡುವುದು ಅವಶ್ಯಕವಾಗಿದೆ.

ಇನ್ನೊಂದು ಶೋಚನೀಯ ಪರಿಸ್ಥಿತಿ ಕೋರ್ಟಿನಲ್ಲಿ ನೋಡಿರಬಹುದು. ಅನೇಕ ಕಡೆ ಸರಿಯಾದ ಕುರ್ಚಿಯಿಲ್ಲ, ಟೇಬಲ್ ಇಲ್ಲ, ವಕೀಲರಿಗೆ ಕೂಡುವುದಕ್ಕೆ ಸ್ಥಳವಿಲ್ಲ, ಕಕ್ಷಿಗಾರರು ಮತ್ತು ವಕೀಲರು ಕೂಡಲು ಸೌಕರ್ಯವಿಲ್ಲ. ಜ್ಯುಡಿಷಿಯಲ್ ಆಫೀಸರುಗಳು ಉಪಯೋಗಿಸುವ ಟೇಬಲ್ ಕ್ಲಾತ್ ನೋಡಿದರೆ ನಾಚಿಕೆಯಾಗುವುದು, ಹರಕು ಮುರುಕು ಕ್ಲಾತ್ ಇರುವುದು. ನ್ಯಾಯಾಸ್ಥಾನ ಪವಿತ್ರವಾದ ಸ್ಥಳ, ನಾಗರಿಕರ ಹಕ್ಕುಗಳನ್ನು ಸಂರಕ್ಷಣೆ ಮಾಡುವ ಸ್ಥಳ. ಅಲ್ಲಿ ಈ ರೀತಿ ಇದ್ದರೆ ನೀವು ಅವಮಾನ ಮಾಡಿದಂತಾಗುವುದು. ಯಾವುದೇ ಕೋರ್ಟಿಗೂ ಸರಿಯಾದ ಫರ್ನಿಚರ್ ಇಲ್ಲ. ಕೋರ್ಟಿಗಳ್ತರೆ ಬೇರೆ ಕಡೆ ಖರ್ಚುಮಾಡುತ್ತಿದ್ದಾರೆ, ಅಸಿಸ್ಟೆಂಟ್ ಎಂಜಿನಿಯರ್ ಆಫೀಸು, ಎಂ.ಎಸ್.ಆರ್.ಟಿ.ಸಿ. ಆಫೀಸು ಮುಂತಾದ ಕಡೆ ನೋಡಿದರೆ ಹೊಳೆಯುವ ಕುರ್ಚಿಗಳು, ನವೀನ ರೀತಿಯ ಟೇಬಲ್ಲುಗಳು, ಫ್ಯಾನುಗಳು ಮುಂತಾದ್ದೆಲ್ಲಾ ಇರುತ್ತವೆ. ಆದರೆ ನ್ಯಾಯಾಧೀಶರಿಗೆ ಇವುಗಳ ಸೌಕರ್ಯವಿಲ್ಲ. ಇಷ್ಟು ತಿರಸ್ಕಾರವೇಕೆ? ಇದನ್ನು ಗಮನಿಸಿ ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕು.

ಕೆಲಸ ಮಾಡತಕ್ಕ ಕಾರಕೂನರು ಅನೇಕ ಕೋರ್ಟುಗಳಲ್ಲಿ ಸಮನ್ಸ್ ಸರಿಯಾಗಿ ಇಷ್ಯೂ ಮಾಡುವುದಿಲ್ಲ, ಪ್ರಿಂಟೆಡ್ ಸಮನ್ಸ್ ಇಲ್ಲ. ಪ್ರಿಂಟೆಡ್ ಸಮನ್ಸ್ ಒದಗಿಸದೆ ಇರುವುದರಿಂದ ಚಿಕ್ಕ ಚಿಕ್ಕ ಹಾಳೆಗಳಲ್ಲಿ ಬರೆದು ಕಳುಹಿಸುತ್ತಿದ್ದಾರೆ. ಅದನ್ನು ಓದಲಕ್ಕೆ ಸಹಿತ ಬರುವುದಿಲ್ಲ. ಈ ರೀತಿಯಾಗಿ ಸ್ಟೇಷನರಿ ಇಲ್ಲದೆ ಕೋರ್ಟುಗಳಲ್ಲಿ ಅವ್ಯವಸ್ಥೆ ನಡೆಯುತ್ತಿದೆ. ಅದಕ್ಕೆ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ ನ್ಯಾಯಾಲಯಗಳ ವಿಚಾರವಲ್ಲ ನಮಗೆ ವಿಶ್ವಾಸವಿದೆ ಮತ್ತು ನ್ಯಾಯಾಲಯಕ್ಕೆ ಪ್ರಜಾಪ್ರಭುತ್ವದಲ್ಲಿ ಮಹತ್ವ ಸ್ಥಾನವಿದೆ. ಅವಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸಬೇಕು, ಸರಿಯಾದ ಸಾಮಾನುಗಳನ್ನು ಒದಗಿಸಬೇಕು, ನ್ಯಾಯಾಸ್ಥಾನ ಸರಿಯಾಗಿ ನಡೆಯುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ನಾವು ಕಾಯಿದೆಗಳನ್ನು ಮಾಡುತ್ತಿದ್ದೇವೆ. ಚಕ್ಕಡಿಗಟ್ಟಲೆ ಕಾಯಿದೆಗಳನ್ನು ಮಾಡುತ್ತಿದ್ದೇವೆ. ಅದರಲ್ಲಿ ಸರಿಯಾದ ತಿಳುವಳಿಕೆಯಿಂದ ಆಗುತ್ತಿಲ್ಲ ಎಂದು ಹೇಳಬಯಸುತ್ತೇನೆ. ಒಂದು ಉದಾಹರಣೆ ಕೊಡಬಯಸುತ್ತೇನೆ. 1964ರಲ್ಲಿ ಲ್ಯಾಂಡ್ ರೆವಿನ್ಯೂ ಆಕ್ಟ್ ಪಾಸ್ ಮಾಡಿದ್ದೇವೆ. ಹಳೇ ಮೈಸೂರು ಲ್ಯಾಂಡ್ ರೆವೆನ್ಯೂ ಆಕ್ಟ್‌ನಲ್ಲಿ ಬಾಂಬೇ ಲ್ಯಾಂಡ್ ರೆವೆನ್ಯೂ ಆಕ್ಟ್‌ನಲ್ಲಿ ಅಪೀಲ್ ಯಾವರೀತಿ ಇತ್ತು ಎಂದರೆ, ರೆವೆನ್ಯೂ ಅಧಿಕಾರಿಯ ಹುಕುಮಿನ ಮೇಲೆ ಮೇಲ್ಪಟ್ಟ ಅಧಿಕಾರಿಗಳಿಗೆ ಅಪೀಲು ಹೋಗುವ ಅಧಿಕಾರವಿತ್ತು. ರೆವೆನ್ಯೂ ಅಧಿಕಾರಿಗಳು ಅನೇಕ ರೀತಿಯ ಕೆಲಸ ಮಾಡುತ್ತಾರೆ. ಬೇರೆ ಕಾಯಿದೆಗಳ ಕೆಳಗೆ ಸಹ ಕೆಲಸ ಮಾಡುತ್ತಾರೆ. ಅವರು ಯಾವುದೇ ಹುಕುಂ ಮಾಡಿದರೂ ಅದರ ಮೇಲೆ ಅಪೀಲು ಹೋಗುವುದಕ್ಕೆ ಅವಕಾಶವಿತ್ತು. ಅಂಥ ಸೆಕ್ಷನ್ ತೆಗೆದು 49ನೇ ಸೆಕ್ಷನ್ ಪಾಸ್ ಮಾಡಿದ್ದೇವೆ. ಅದರಲ್ಲಿ :

"'...provided an appeal shall lie...original order passed under this Act or the rules made thereunder..."

'ಅಂದರ್ ದಿಸ್ ಆಕ್ಟ್' ಎನ್ನುವ ಶಬ್ದ ಉಪಯೋಗ ಮಾಡಿರುವುದರಿಂದ ತಹಸೀಲ್ದಾರರಾಗಲೀ, ಅಸಿಸ್ಟೆಂಟ್ ಕಮಿಷನರಾಗಲೀ, ಡೆಪ್ಯುಟಿ ಕಮಿಷನರಾಗಲೀ ಯಾವುದೇ ಆರ್ಡರ್ ಮಾಡಿದರೆ ಲ್ಯಾಂಡ್ ರೆವೆನ್ಯೂ ಆಕ್ಟ್ ಕೆಳಗೆ ಏನು ಆರ್ಡರ್ ಮಾಡುತ್ತಾರೆ ಅದರ ಮೇಲೆ ಮಾತ್ರ ಅಪೀಲು ಹೋಗಲು ಅವಕಾಶವಿದೆ. ಉಳಿದ ಯಾವುದೇ ಕಾಯಿದೆ ಕೆಳಗೆ ಒಂದು ಹುಕುಂ ಮಾಡಿದರೆ ಅದರ ಮೇಲೆ ಅಪೀಲು ಮಾಡಲಕ್ಕೆ ಅವಕಾಶವಿಲ್ಲ. 1967ನೇ ಇಸವಿಯಲ್ಲಿ ಹೈಕೋರ್ಟಿನ ಫುಲ್ ಬೆಂಚ್ ಈ 49ನೇ ಸೆಕ್ಷನ್ ಬಗ್ಗೆ ಒಂದು ಪ್ರಕರಣ ಬಂದಾಗ ಒಂದು ನಿರ್ಣಯ ಮಾಡಿದ್ದಾರೆ. ಈ ಸೆಕ್ಷನ್ ತಪ್ಪಾಗಿದೆ, ನ್ಯಾಯಾದರ್ಶಿಂಗ್ಸ್ ಇಲ್ಲ, ಕೂಡಲೇ ಸರ್ಕಾರದವರು ಇದನ್ನು ತಿದ್ದುಪಡಿ ಮಾಡಬೇಕು, ಬಾಂಬೇ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿರುವಂತಾಗಲೀ, ಮೈಸೂರು ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿರುವಂತಾಗಲೀ ತಿದ್ದುಪಡಿ ಮಾಡಬೇಕು ಎನ್ನುವ ಆದೇಶವನ್ನು ನೀಡಿದ್ದಾರೆ. ಇದಾಗಿ ಮೂರು ವರ್ಷವಾದರೂ ಈ ಬಗ್ಗೆ ತಿದ್ದುಪಡಿ ತರಲಿಲ್ಲ. ಲ್ಯಾಂಡ್ ರೆವೆನ್ಯೂ ಆಕ್ಟ್ ಮೂರುಸಲ ತಿದ್ದುಪಡಿಯಾಗಿದೆ. ಶ್ರೀಮಾನ್ ಶ್ರೀಕಂಠಯ್ಯನವರು ಈ ಬಗ್ಗೆ ಒಂದು ಮಸೂದೆಯನ್ನು ಸಹಿತ.....

Mr. SPEAKER.—When a statute is there, it cannot be criticised except by way of an amendment.

Srl S. R. BOMMAI.—When a suggestion is made by the High Court it is for the Legal Department to correct it.

Mr. SPEAKER.—The hon. member could have brought an amendment.

Srl S. R. BOMMAI.—I have brought an amendment.

Mr. SPEAKER.—There the matter ends. It need not be debated here.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೂ ಅಲ್ಲದೆ ಅನೇಕ ರಿಟ್ ಪಿಟಿಷನ್‌ಗಳಲ್ಲಿ, ದಾವೆಗಳಲ್ಲಿ, ಹೈಕೋರ್ಟಿನವರು ಸ್ಟಿಕ್ಚರ್ ಪಾಸ್ ಮಾಡಿದ್ದಾರೆ, ಅಧಿಕಾರಿಗಳ ಬಗ್ಗೆ ಟೀಕೆ ಮಾಡಿದ್ದಾರೆ, ಸರ್ಕಾರದ ಆಜ್ಞೆ ಬಗ್ಗೆ ಟೀಕೆ ಮಾಡಿದ್ದಾರೆ. ಕಾಯಿದೆಗಳ ಬಗ್ಗೆ ಹೈಕೋರ್ಟಿನವರು ಯಾವುದೇ ಒಂದು ಸ್ಟಿಕ್ಚರ್ ಪಾಸ್ ಮಾಡಿದ ಮೇರೆ, ಅದರ ಬಗ್ಗೆ ಯೋಗ್ಯವಾದ ಕ್ರಮ ಕೈಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯ. ನರ್ಮಿನ್ ಮ್ಯಾಟರ್ಸ್‌ನಲ್ಲಿ ಹೈಕೋರ್ಟಿನವರು ಕೊಡತಕ್ಕ ಆದೇಶವನ್ನು

(ಶ್ರೀ ಎಸ್, ಆರ್. ಬೊಮ್ಮಾಯಿ)

ಮಾನ್ಯ ಮಂತ್ರಿಗಳು ಮಾನ್ಯ ಮಾಡುವುದಿಲ್ಲ, ಕಂಟೆಂಪ್ಟ್ ಪ್ರೊಸೀಡಿಂಗ್ಸ್‌ನಲ್ಲಿ ಸಹಿತ ಹೈಕೋರ್ಟಿನ ಆದೇಶವನ್ನು ಮಾನ್ಯ ಮಾಡದಂಥ ಅನೇಕ ಪ್ರಕರಣಗಳನ್ನು ನಾವು ನೋಡುತ್ತಿದ್ದೇವೆ. ಜನಗಳಿಗೆ ಹೈಕೋರ್ಟಿನಲ್ಲಿ ವಿಶ್ವಾಸ ಉಳಿಯಬೇಕಾದರೆ, ಜುಡಿಷಿಯರಿಯಲ್ಲಿ ಜನಗಳಿಗೆ ವಿಶ್ವಾಸ ಉಳಿಯಬೇಕಾದರೆ, ನ್ಯಾಯಾಲಯಗಳು ಕೊಟ್ಟ ತೀರ್ಪುಗಳನ್ನು, ನೋಟಿಸುಗಳನ್ನು ಸರ್ಕಾರ ತೀರ್ವವಾಗಿ ಮಾನ್ಯ ಮಾಡಿ ಕಾರ್ಯಕ್ರಮದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಲೇಬರ್ ಕಾಯಿದೆ ಬಗ್ಗೆ ಒಂದು ಮಾತು ಹೇಳುವುದಾದರೆ, ನಮ್ಮ ದೇಶದಲ್ಲಿ ಒಂದು ವಿಚಿತ್ರವಾದ ಪದ್ಧತಿ ನಡೆದಿದೆ. ಈ ದೇಶದಲ್ಲಿ ಉದ್ಯೋಗ ಬೆಳವಣಿಗೆಯಾಗುವುದಕ್ಕಿಂತ ಮೊದಲೇ ಲೇಬರ್ ಕಾಯಿದೆಗಳು ಹೆಚ್ಚಾಗಿವೆ. ಆ ಕಾಯಿದೆಗಳ ತೊಡಕು ಹೆಚ್ಚಾಗಿದೆ. ಅದರಲ್ಲಿಯೂ ನಾವು ಉದ್ಯೋಗದಲ್ಲಿ ಬಾಲ್ಯಾವಸ್ಥೆಯಲ್ಲಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಈ ಕಾಯಿದೆಗಳು ನರಿಯಾಗಿ ಆಚರಣೆಯಲ್ಲಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದರಲ್ಲಿಯೂ ರಾಜಕೀಯ ಕಾರ್ಮಿಕ ಚಳುವಳಿಗಳಲ್ಲಿ ಹೆಚ್ಚಾಗಿ ಬರುತ್ತಿದೆ. ನಾನು ಕಾಯಿದೆ ಮಂತ್ರಿಗಳಿಗೆ ಒಂದು ಸಲಹೆ ಮಾಡಬಯಸುತ್ತೇನೆ, ಕಾರ್ಮಿಕರ ಚಳುವಳಿ ಯೋಗ್ಯರೀತಿಯಿಂದ ನಡೆಯಬೇಕಾದರೆ, ಸರ್ಕಾರದವರು ಮಾಡಿದಂಥ ಕಾರ್ಮಿಕರ ಹಿತವ ಕಾಯಿದೆಗಳಿಂದ ಅವರಿಗೆ ಒಳ್ಳೆಯದಾಗಬೇಕಾದರೆ, ಯಾವುದೇ ರಾಜ್ಯ ಪಕ್ಷದ ಸದಸ್ಯರು ಕಾರ್ಮಿಕ ಸಂಘದ ಅಧಿಕಾರಿಗಳಾಗಿ ಇರಲೇ ಕೂಡದು ಎನ್ನುವ ಕಾಯಿದೆ ಮಾಡುವುದು ಅತ್ಯಂತ ಅವಶ್ಯಕ. ಯಾವುದೇ ರಾಜಕೀಯ ಪಕ್ಷದವರಿರಲಿ.....

ಶ್ರೀ ಎಚ್. ಸಿದ್ಧವೀರಪ್ಪ.—ಸಿಂಡಿಕೇಟ್ ಸದಸ್ಯರು ಮಾತ್ರ ಇರಬಹುದು, ಮತ್ತೆ ಯಾರೂ ಇರಬಾರದು ಎನ್ನುವ ಒಂದು ಸಣ್ಣ ತಿದ್ದುಪಡಿಯನ್ನು ಸೇರಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಅನುಭವದಿಂದ ಹೇಳುತ್ತಿದ್ದೇನೆ, ಎಷ್ಟೋ ಪ್ರಕರಣಗಳಲ್ಲಿ ನೋಡುತ್ತಿದ್ದೇವೆ, ಚಳುವಳಿ ಮಾಡಿಸುತ್ತಿದ್ದಾರೆ. ಒಳ್ಳೆಯ ಕೂಲಿಗಾರರ ಮುಖಂಡರು ಕೆಲವರಿದ್ದಾರೆ. ಅವರು ಕೂಲಿಗಾರರ ಸಲುವಾಗಿ, ಅವರ ಹಿತದ ಸಲುವಾಗಿ ಕೆಲಸ ಮಾಡುತ್ತಿದ್ದಾರೆ. ಎಷ್ಟೋ ಜನ ಈ ಕಾಯಿದೆಯನ್ನು ದುರುಪಯೋಗ ಮಾಡುತ್ತಿದ್ದಾರೆ, ಹಳ್ಳಿಯಲ್ಲಿ ಮತ್ತು ಬೇರೆ ಕಡೆ ನಾನು ನೋಡಿದ್ದೇನೆ; ಕಾರ್ಮಿಕ ಮುಖಂಡರು ಚಳುವಳಿ ಮಾಡಿಸುತ್ತಾರೆ. ಮಾಲೀಕರ ಕೂಡ ಒಟ್ಟಾಗಿ, ಲೇಬರ್ ಆಫೀಸರ ಕೂಡ ಒಟ್ಟಾಗಿ ಕಾರ್ಮಿಕರಿಗೆ ಸಿಕ್ಕತಕ್ಕ ಲಾಭವನ್ನು ಅವರು ಹೊಡೆಯುತ್ತಿರುತ್ತಾರೆ; ಅವರಿಗೆ ಸಿಕ್ಕತಕ್ಕ ಸೌಕರ್ಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ತಪ್ಪಬೇಕಾದರೆ ಕಾಯಿದೆಯಲ್ಲಿ ಸರಿಯಾದ ವ್ಯವಸ್ಥೆಯಾಗುವುದು ಅತ್ಯವಶ್ಯಕ.

Sri ABDUL KHUDDUS ANWAR.—Are not taking labour cases?

Sri S. R. BOMMAI.—I am an advocate. I am entitled to appear for labour cases.

ಅನೇಕ ಸಲ ಸ್ಟ್ರೈಕ್ ಮಾಡಿಸುತ್ತಿದ್ದಾರೆ. ನೂರಕ್ಕೆ 90 ಮಂದಿ ಕೂಲಿಕಾರರು ಕೆಲಸಕ್ಕೆ ಹೋಗಬೇಕೆಂದು ವಿಚಾರ ಮಾಡುತ್ತಿದ್ದರೆ, ಮಾಲೀಕರು ಕೂಡ ಒಳ್ಳೆಯ ರೀತಿಯಿಂದ ನಡೆದುಕೊಂಡು ಒಪ್ಪಂದಕ್ಕೆ ಬರಬೇಕು ಎಂದು ಇದ್ದರೂ, ನೂರಕ್ಕೆ ಹತ್ತಿಪ್ಪತ್ತು ಜನ, ಕೆಲವೊಂದು ರಾಜಕೀಯ ಉದ್ದೇಶದ ಸಲುವಾಗಿ, ಕೂಲಿಕಾರರ ಮುಖಂಡರ ಸ್ವಾರ್ಥದ ಸಲುವಾಗಿ ಗಲಾಟೆ ಮಾಡಿ ನೂರಕ್ಕೆ 90 ರಷ್ಟು ಜನ ಕೆಲಸಕ್ಕೆ ಹೋಗುವುದನ್ನು ತಡೆಯುತ್ತಾರೆ. ಕಾರ್ಮಿಕ ಚಳುವಳಿ ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾದರೆ ಸರಿಯಾದ ತಿದ್ದುಪಡಿಯನ್ನು ಕೂಲಿಕಾರರ ಸಂಘಗಳ ರಿಜಿಸ್ಟ್ರೇಷನ್ ಕಾಯಿದೆಯಲ್ಲಿ ತರಬೇಕು. ಕೇಂದ್ರ ಸರ್ಕಾರದ ಕಾನೂನಿನಲ್ಲಿ ಬದಲಾವಣೆ ಆಗಬೇಕಾಗಿದ್ದರೂ ಅವರಿಗೆ ತಿಳಿಸಿ ತಿದ್ದುಪಡಿ ಮಾಡಿಸಬೇಕು ಎಂದು ಹೇಳಬಯಸುತ್ತಿದ್ದೇನೆ.

ಅನೇಕ ಕಾಯಿದೆಗಳ ಅಮಲುಜಾರಣೆಯಲ್ಲಿ, ಲೇಬರ್ ಕೋರ್ಟುಗಳು, ಲೇಬರ್ ಇನ್ಸ್‌ಪೆಕ್ಟರುಗಳು ಇವರ ಕಾರ್ಯಾಚರಣೆಯ ಬಗ್ಗೆ ಹೆಚ್ಚಿನ ಗಮನ ಕೊಡುವುದು ಅವಶ್ಯ. ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ಸ್ ಕಾನೂನು ಒಳ್ಳೆ ಹೇಳುವುದಾದರೆ, ಅನೇಕ ಜನ ಒಳ್ಳೆಯ ವ್ಯಾಪಾರಸ್ಥರು ಸರಿಯಾಗಿ ನಡೆದುಕೊಂಡು ಅಂಗಡಿ ಮುಚ್ಚಿಕೊಂಡು ಹೋಗುತ್ತಾರೆ. ಇದರೂ ಹೇಟೆ ನಡೆಯುತ್ತಿರುತ್ತದೆ, ಕೂಲಿಕಾರರಿಂದ ಕೆಲಸ ತೆಗೆದುಕೊಳ್ಳುತ್ತಾರೆ. ಷಾಪ್ ಇನ್ಸ್‌ಪೆಕ್ಟರಿಗೂ,

ಅಂಗಡಿ ಮಾಲೀಕರಿಗೂ ಅನೇಕ ಕಡೆಗಳಲ್ಲಿ ಒಂದು ರೀತಿಯ ಸಂಬಂಧವೇರ್ಪಟ್ಟು ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಕಾನೂನುಗಳು ಸರಿಯಾಗಿ ಅಮಲುಬಜಾವಣಿಯಲ್ಲಿ ಬಾಬೇಕು, ಇದರ ಬಗ್ಗೆ ಹೆಚ್ಚಿನ ತೀವ್ರತರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

2-00 P.M.

Sri ABDUL KHUDDUS ANWAR (Bhadravathi).—Mr. Speaker Sir, at the outset I oppose the demands, particularly the Labour Demand. Sir, the grant allocated to the Labour Department is very meagre. Very recently two more Deputy Labour Commissioners have been appointed. Sir, I suggest that some Implementation Committees will have to be appointed because a lot of work has to be done. There are so many awards from so many Courts and Tribunals. Thousands of cases are still pending in the Courts. Some cases have gone to the High Court for which decision of the High Court is given. But not implemented. These decisions have to be given effect to. For giving effect to these decisions Implementation Committees have to be constituted. The present system of the working of the Department is very peculiar. Our Labour Minister has attended so many Labour Conferences and he has said on so many occasions that we should encourage one Union which has got the largest number of membership. Though he has agreed to that principle, he has not given effect to it. As Sri Krishnan puts it, only the Association which is very near to the Minister is being encouraged. The other Associations who have got a large number of members have not been recognised. For instance, the Hindustan Machine Tools Association is pending recognition since a long time, Sir, with regard to the implementation of wage awards, it has not been given effect. to in some factories like Thungabhadra Sugar Factory, Mandya Sugar Factory and Bhadravathi Iron and Steel Works. Tukol Commission recommendations have been accepted. But these awards have not been given effect to in full. May I request the Hon. Minister to go into these details and see these awards are implemented fully. Some Factories have partially implemented it. Why not these awards be implemented in full? For that reason, the Minister should insist on the Management to implement them fully. If they do not implement the awards fully, they should be prosecuted. For instance with implementing the award, a cut in wage of 2.5 per cent in Thungabhadra Sugar Factory, Mandya Sugar Factory was effected. You can bring an enactment. We will help Government to prosecute the management. This is the thing which they have not done so far. Government have not tried to bring a single enactment to prosecute these managements particularly the Government owned Concerns. As regards the Private Concerns, the Labour Commissioner has got powers and he has taken some action on some management.

With regard to the minimum wage, so many factories have not paid the minimum wage. There is no enactment with regard to the payment of minimum wage to the Agriculture labour and also to industria

(SRI ABDUL KHUDDUS ANWAR)

Contract workers. Government have not implemented fully the minimum wage provision in the case of Beedi workers. In the case of Shop and Establishment staff also, the minimum wage has not been given effect to. Therefore, I suggest that Implementation Committees should be formed immediately so that these things could be looked into by these Committees. There are so many anomalies in the present standing orders. In the standing order, there is a clause stating that if an employee goes on leave or absents himself for more than 7 days, he will be liable for removal. Last time I made representation to the Government that this anomaly should be removed or some alternative remedy should be given. These workers are laible for dismissal according to this. The Management will take undue advantage of this and harass the employees. Even if an employee is on leave on medical grounds, and satisfies the management with the medical Certificate he will not be entitled for gratuity and provident fund. Therefore, I request the Government to see that this clause should be modified. If a man is undesirable and unfit, let him be given the benefit of retirement with 3 months notice. But he should not be victimised in this manner.

In most of the Factories, there are no dining halls. The workers are finding it hard on account of the absence of these halls. In the Mysore Iron and Steel Works, there is no dining hall for the last 20 years. You were pleased to say on so many occasions that the dining hall should be provided for employees. But so far dining halls have not been constructed. These workers are being treated as beasts. The Dearness Allowances have to be paid according to the cost of living. When that is the position, I do not understand when the D. A. is reduced to 50 per cent. in the case of those who meet with accidents. Therefore, the Dearness allowance should be given in full ; otherwise it is impossible for the poor workers to get on in these hard days. There is no provision in this Act for compensation to a worker if he meets any electric shock. In case a man is struck by electric shock, he cannot get anything. If a man has lost fingers and limbs and all that, under the medical certificate he is to get all the benefits. I request the Hon. Minister to see that those people who are disabled on account of electric shock should be given full compensation and retired. At the same time when a man gets injury in the abdomen, he is not entitled to be given any benefit because it is not mentioned in the Act. Such cases should be taken into account and viewed with humanitarian consideration and full compensation given. I request the Hon. Minister to see that these anomalies are rectified and an amendment to the Act should be brought so that they may be entitled for full compensation. There may be an electric shock not on account of the folly of the workman, but on account of some irregular working of the machinery. Therefore, he should not be penalised for that.

I would like to say a few words about the working of the Employment Exchanges. There are thousands of unemployed Civil Engineering Diploma holders and Graduates. As per the figures furnished by the Government, more than five thousand civil engineering diploma holders and Graduates are idle. The Mysore Iron and Steel Limited, recruited 300 to 400 persons very recently, but civil engineering Graduates and Diploma holders were not employed. The course is the same for Mechanical, Electrical and Civil Engineering for the first two years, and only in the final year they change their main subjects. I request the Government to see that these civil engineering graduates and diploma holders are provided with jobs. Lot of things are going on in Employment Exchanges. They get pressure from officers to send particular names and those names are sent by the Employment Exchanges although there are people who have registered their names 5 to 10 years back. I know instances of recruitment of persons in industrial concerns who were working in Employment Exchanges *e.g.*, in the Mysore Iron and Steel, Limited. I request the Hon'ble Minister to see that these unemployed people are employed or alternative jobs are given.

In most of the factories, even 10 per cent of the employees have not been provided with houses. In Bhadravahti, only about 25 per cent of the workers have been provided with houses. There is dearth for houses. A worker retires after serving for nearly 30 to 35 years and he will not have the benefit of a small house to live in. I suggest that out of the Provident Fund and National Saving amount that is being collected from workers, a retired employees colony may be established in all industrial towns—I am not pleading only for Bhadravati, but I insist houses to be constructed for the retired employees out of the Provident Fund and National Savings amount.

There is no Personnel Department in a big concern like M.S.R.T.C., and personnel cases are not properly dealt with. This Department should be independent by itself; it should not be under the control of the General Manager. It may be under the top man directly. I request the Hon'ble Minister to kindly see that the Personnel Department is started immediately in M.S.R.T.C., and the grievances of the workers are redressed.

The Hon. Minister has agreed that there should be a Trade Union for every institution. I am happy about it, and I request that this principle should be followed.

I deny the statement made by my friend Sri S. R. Bommai that Labour leaders are utilising the services of labourers for their own benefits. I wish to say that they are on right lines and directing the labourers on right path and the hon. member can verify this at Bhadravati, where industrial truce was first introduced which was ultimately followed by the whole country.

Many industrial disputes are pending disposal. More powers should be given to the Labour Department to see that these cases are disposed of quickly. I know there are more than one thousand cases pending.

(SRI ABDUL KHUDDUS ANWAR)

Sir, coming to contract labour, I suggest that this contract labour should be abolished, because these middleman take Rs. 4 to Rs. 5 per worker from the Management and supply labour but only pay the worker Rs. 2 to Rs. 2.50. Sir, the Hon'ble Minister has agreed in many conferences that this system should be abolished. But, so far no action has been taken. I request that contract labour should be abolished and the workers should be treated as regular employees of the concern.

As we know most of the Textile mills have come to a closure and the workers are thrown out of employment. I request the Hon'ble Minister to see that these thousands of people are provided with jobs ; they will pray for his prosperity so that he may become the Prime Minister of the country in future.

With these few words, I thank the Chair.

† ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ಮುಖ್ಯವಾಗಿ ರಿಜಿಸ್ಟ್ರೇಚರ್ ಬಗ್ಗೆ ಹೇಳುವುದಾದರೆ ಕೌನ್ಸಿಲನ್ನು ರದ್ದುಪಡಿಸಬೇಕು ಎನ್ನುವ ಒಂದು ಸೂಚನೆ ಬಂದಿದೆ. ಶ್ರೀಮಾನ್ ನಾಗಪ್ಪನವರು ಈ ಸೂಚನೆಯನ್ನು ಕಳುಹಿಸಿದ್ದಾರೆ. ಚಿಕ್ಕಚಿಕ್ಕ ರಾಜ್ಯಗಳಲ್ಲಿ ಕೌನ್ಸಿಲ್ ಇರಬೇಕೇ, ಬೇಡವೇ ಎನ್ನುವ ಪ್ರಶ್ನೆ ಮಹತ್ವದ್ದು. ಜೊತೆಗೆ ನಮ್ಮ ಅಭಿಪ್ರಾಯದಲ್ಲಿ ನಮ್ಮ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಕೌನ್ಸಿಲನ್ನು ರದ್ದುಪಡಿಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಉಪಾಧ್ಯಾಯರ ಕ್ಷೇತ್ರ, ಪದವೀಧರರ ಕ್ಷೇತ್ರ, ಸ್ಥಳೀಯ ಪ್ರಾಧಿಕಾರಿಗಳ ಕ್ಷೇತ್ರ ಈ ರೀತಿ ನಾನಾ ಕ್ಷೇತ್ರಗಳಿಂದ ಪ್ರತಿನಿಧಿಗಳು ಆರಿಸಿ ಬಂದು ಈ ಕೌನ್ಸಿಲ್‌ನಲ್ಲಿ ಕಾರ್ಯಭಾರ ಮಾಡುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಅಂದರೆ ಬ್ರಿಟಿಷ್ ಪಾರ್ಲಮೆಂಟ್‌ನಲ್ಲಿದ್ದ ಹೌಸ್ ಆಫ್ ಲಾರ್ಡ್ಸ್ ಯಾವರೀತಿ ಕೆಲಸ ಮಾಡುತ್ತಿತ್ತೋ ಅದೇ ರೀತಿ ಇಲ್ಲಿಯೂ ಮೇಲ್ಮನೆಯವರು ಜೆನ್ಟಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದರು. ಈಗಿನ ಕಾಲದಲ್ಲಿ ಈ ಮೇಲ್ಮನೆಯಲ್ಲಿ ಆಗುವ ಕೆಲಸ ನೋಡಿದರೆ ಈ ಕೆಳಮನೆಯಲ್ಲಿ ಏನು ಕಾಯಿದೆ ಪಾಸು ಮಾಡುತ್ತೇವೋ ಅದಕ್ಕೆ ಮೇಲ್ಮನೆಯವರು ಅನ್ನು, ಎನ್ನುವುದೇ ಹೊರತು ಏನಾದರೂ ಒಂದು ಅಮೂಲ್ಯವಾದ ಸೂಚನೆ ಬಂದಿದೆಯೇ ಎಂದರೆ ಏನೂ ಇಲ್ಲ. ಹೀಗಾಗಿ ವೇಳೆ ಮತ್ತು ಹಣ ಖರ್ಚಾಗುತ್ತಾ ಇರುವುದನ್ನು ತಪ್ಪಿಸಬೇಕು. ಆದ್ದರಿಂದ ಈ ಮೇಲ್ಮನೆಯನ್ನು ರದ್ದುಮಾಡಬೇಕು. ಈ ಸಣ್ಣ ರಾಜ್ಯವಾದ ಮೈಸೂರಿನಲ್ಲಿ ಈ ಮೇಲ್ಮನೆಯನ್ನು ರದ್ದು ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯ, ಶ್ರೀಮಾನ್ ಎಸ್. ಆರ್. ಬೊಮ್ಮಾಯಿ ಅವರು ನ್ಯಾಯಾಧೀಶರಿಗೆ ಅನೇಕ ಕಡೆಗಳಲ್ಲಿ ಮನೆಗಳಿಲ್ಲವೆಂದು ಹೇಳಿದರು. ನ್ಯಾಯಾಧೀಶರಿಗೆ ಮನೆಗಳು ಸಿಕ್ಕದೇ ಇರುವುದರಿಂದ ಅವರ ಕೆಲಸಕ್ಕೆ ಬಹಳಷ್ಟು ತೊಂದರೆಯಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಅವರಿಗೆ ಮನೆಗಳನ್ನು ಕಟ್ಟಿಕೊಡುವುದು ಅವಶ್ಯಕ. ಅವರ ಕುಂದುಕೊರತೆಗಳನ್ನು ಹೋಗಲಾಡಿಸಬೇಕು. ಅವರಿಂದ ಯೋಗ್ಯವಾದ ಕೆಲಸವನ್ನು ತೆಗೆದುಕೊಳ್ಳುವುದು ಅವಶ್ಯಕ ಇದೆ. ಈ ಪ್ರಜಾ ಪ್ರಭುತ್ವದಲ್ಲಿ ನ್ಯಾಯಾಸ್ಥಾನ ಅವಶ್ಯಕ. ಅವರು ಸ್ವತಂತ್ರವಾಗಿ ಕೆಲಸ ಮಾಡುವುದು ಅವಶ್ಯಕ ಇದೆ. ಆದುದರಿಂದ ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದು ಒಳ್ಳೆಯದು. ಹೈಕೋರ್ಟಿನಲ್ಲಿ ಬಹಳಷ್ಟು ಕೇಸುಗಳು ಇತ್ಯರ್ಥವಾಗುವುದು ತಡವಾಗುತ್ತಿದೆ. ಅದರಿಂದ ನ್ಯಾಯ ದೊರಕುವುದು ನಿಧಾನವಾಗುತ್ತಿದೆ. ಇದರ ಪರಿಣಾಮವಾಗಿ ಜನರಿಗೆ ತೊಂದರೆಯಾಗುತ್ತಿದೆ. ಈ ದೃಷ್ಟಿಯಿಂದ ಜನರಿಗೆ ತೀವ್ರವಾಗಿ ನ್ಯಾಯ ದೊರಕುವ ನಲುವಾಗಿ ಅವರಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕು. ಹಾಗಾದರೆ ಅವರಿಂದ ಸಾಕಾದಷ್ಟು ಕೆಲಸವನ್ನು ಬೇಗ ಮಾಡಿಸಿ ಜನರಿಗೆ ಹೆಚ್ಚು ಸೌಕರ್ಯವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಇದು ಅತ್ಯಂತ ಅವಶ್ಯ ಇದೆ.

ಕೊನೆಯದಾಗಿ ರೇಬರ್ ಮತ್ತು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳುವುದಾದರೆ ಈಗಾಗಲೇ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಸುಮಾರು 1 ಲಕ್ಷ 22 ಸಾವಿರ ಜನ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಇನ್ನೂ ರಿಜಿಸ್ಟರ್ ಮಾಡಿಸಿಕೊಳ್ಳದೇ ಇರುವವರು ಇದ್ದಾರೆ. ಸುಶಿಕ್ಷಿತ

ನಿರುದ್ಯೋಗಿಗಳು ನಮ್ಮ ರಾಜ್ಯದಲ್ಲಿ ಇದರ 4 ಪಟ್ಟು ಇದ್ದಾರೆನ್ನುವುದಕ್ಕೆ ಅಡ್ಡಿ ಇಲ್ಲ. ಆದರೆ ಈಗ ಇದನ್ನೆರಾಜ್ಯ ನೋಡಿದರೆ ಅವರಿಗೆ ಉದ್ಯೋಗ ದೊರಕಿಸಿಕೊಡಬೇಕಾದ್ದು ಅತ್ಯಂತ ಅವಶ್ಯಕ ಇದೆ. ಒಂದು ಕಡೆ ನಿರುದ್ಯೋಗ ತಾಂಡವವಾಡುತ್ತಾ ಇರುವಾಗ ಕೆಲವು ಕಡೆ ಕೆಲಸ ಇದ್ದು ಯೋಗ್ಯ ಜನ ದೊರೆಯುವುದಿಲ್ಲ. ಅಂಥವರನ್ನು ತಯಾರು ಮಾಡುವುದು ಅವಶ್ಯಕ. ಅಲ್ಲಲ್ಲಿ ನೋಡಿದರೆ ಸೆಮಿ ಟೆಕ್ನಿಕಲ್, ಸ್ಕಿಲ್ಡ್ ಲೇಬರರ್ಸ್, ಬಡಗಿಗಳು, ಕಮ್ಮಾರರು, ಮನೆ ಕಟ್ಟುವವರು ಅದಲ್ಲದೆ ವಕ್ಕಲು ತನದ ಕೆಲಸದಲ್ಲೂ ಕೂಡ ಅನೇಕ ಕೆಲಸಕ್ಕೆ ಜನ ಸಿಕ್ಕುವುದಿಲ್ಲ. ಕೆಲವೊಂದು ಕೆಲಸಕ್ಕೆ ಜನ ಸಿಕ್ಕುತ್ತಾರೆ. ಕೆಲವೊಂದು ಕೆಲಸಕ್ಕೆ ಜನ ಸಿಕ್ಕುವುದಿಲ್ಲ. ಅನೇಕ ಇಂಡಸ್ಟ್ರೀಸ್‌ನಲ್ಲಿ ಶಿಕ್ಷಣ ಕೊಡುವುದನ್ನು ಮಾಡಿದ್ದಾರೆ. ಅದರಲ್ಲಿ ಥಿಯರಿ ಜೊತೆಗೆ ಪ್ರಾಕ್ಟಿಕಲ್ ಟ್ರೈನಿಂಗ್ ಕೂಡ ಕೊಡ ಬೇಕು. ಕಮ್ಮಾರರು, ಬಡಗಿಗಳು, ಸ್ಕಿಲ್ಡ್ ಲೇಬರರ್ಸ್, ಸೆಮಿ ಟೆಕ್ನಿಕಲ್ ಇಂಥ ಕೆಲಸ ಮಾಡಲು ಪ್ರಾಕ್ಟಿಕಲ್ ಆಗಿ ಅನುಭವ ಇರಬೇಕು. ಬರೀ ಥಿಯಾರಿಟಿಕಲ್ ನಾಲೆಡ್ಜ್ ಇದ್ದರೆ ಪ್ರಯೋಜನ ಏಲ್ಲ. ಹಾಗೆ ಬರೀ ಥಿಯಾರಿಟಿಕಲ್ ಆಗಿ ಟ್ರೈನಿಂಗ್ ಕೊಟ್ಟರೆ ಉಪಯೋಗವೂ ಆಗುವುದಿಲ್ಲ. ಈಗ ಎಲೆಕ್ಟ್ರಿಕಲ್ ಇಂಜಿನಿಯರ್ ಪರೀಕ್ಷೆಯಲ್ಲಿ ಪಾಸು ಮಾಡಿಕೊಂಡರೂ ಏನೇನೂ ಕೆಲಸ ಅವರಿಗೆ ಬರುವುದಿಲ್ಲ. ಅವೇ ರೀತಿ ಮೆಕ್ಯಾನಿಕಲ್ ಡಿಪ್ಲೊಮಾ ಪಾಸು ಮಾಡಿದರೂ ಕೂಡ ಒಂದು ಇಂಜಿನ್ ಕೂಡ ನಡೆಸುವುದಕ್ಕೆ ಬರುವುದಿಲ್ಲ. ಇವೊತ್ತು ಈ ರೀತಿಯ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಪಾಸುಮಾಡಿದ ಜನ ಕೆಲಸ ಇಲ್ಲದೆ ಇದ್ದಾರೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಸಾರ್ವಜನಿಕರ ದುಡ್ಡು ಬಹಳ ಖರ್ಚಾಗುತ್ತದೆ. ವೇಳೆಯೂ ಬಹಳಷ್ಟು ಖರ್ಚಾಗುತ್ತದೆ. ಆದುದರಿಂದ ಅವರಿಗೆ ಸರಿಯಾದ ಶಿಕ್ಷಣ ದೊರಕುವಂತೆ ಮಾಡಬೇಕು.

ಈ ವರ್ಷ ಎಕ್ಸ್‌ಪೆಂಟ್‌ಗಾಗಿ 9 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಇದು ಏತಕ್ಕೂ ಸಾಲದು. ಈ ಶಿಕ್ಷಣಕ್ಕೆ ಕೊಡುವಂಥ ಹಣ ಬಹಳ ಕಡಿಮೆ. ಪ್ರತ್ಯೇಕ ಪ್ರಾಕ್ಟಿಕಲ್ ಟ್ರೈನಿಂಗ್ ಕೊಟ್ಟರೆ ಅನುಕೂಲವಾಗುತ್ತದೆ. ಈಗ ಇರುವ ನಿರುದ್ಯೋಗವನ್ನು ನಿವಾರಣೆ ಮಾಡಲು ಯೋಜನೆಗಳನ್ನು ಕೈಗೊಳ್ಳಬೇಕು. ಅನೇಕ ಗ್ರಾಜುಯೇಟ್ಸ್ ಮತ್ತು ಡಿಪ್ಲೊಮಾ ಹೋಲ್ಡರ್ಸ್‌ಗೆ ಕೇಂದ್ರ ಸರ್ಕಾರದವರು ಸ್ಟೈಪಂಡ್ ಕೊಟ್ಟು ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಇದೂ ಸಾಲದು. ಅವರಿಗೆ ಸಾಕಷ್ಟು ಸಾಲ ಸಿಕ್ಕಿ ಹೆಚ್ಚಾಗಿ ಕೆಲಸದಲ್ಲಿ ತೊಡಗುವಂತೆ ಮಾಡಬೇಕು. ಇದರ ಬಗ್ಗೆ ಇನ್ನೂ ಏನೇನು ಯೋಜನೆಗಳು ಇವೆಯೋ ಅದನ್ನು ಅನುಷ್ಠಾನಕ್ಕೆ ತಂದು ಹೆಚ್ಚು ಜನರಿಗೆ ಕೆಲಸ ಸಿಗುವಂತೆ ಮಾಡಬೇಕು. ಅವರಿಗೆ ಸ್ವತಂತ್ರವಾದ ಉದ್ಯೋಗಗಳನ್ನು ಮಾಡಿ ಕೊಟ್ಟರೆ ಈ ನಿರುದ್ಯೋಗದ ಸಮಸ್ಯೆಯನ್ನು ಬಿಡಿಸಬಹುದು. ಬರೀ ಸರ್ಕಾರಿ ನೌಕರಿಗೆ ಇವರನ್ನು ತಗೆದು ಕೊಳ್ಳುತ್ತೇವೆ ಎಂದರೆ ಸಾಲದು. ಇದು ಸರಿಯಾದ ಮಾತಲ್ಲ. ಇಂದು ಸರ್ಕಾರಿ ಕಛೇರಿಗಳಲ್ಲಿ ಬಹಳಷ್ಟು ಜನ ಕೆಲಸಕ್ಕೆ ತಗೆದುಕೊಳ್ಳುತ್ತಿದ್ದೀರಿ. ಅದರೆ ಅಲ್ಲಿ ಜನರಿಗೆ ಸಾಕಷ್ಟು ಕೆಲಸವಿಲ್ಲ. ಅದನ್ನು ತಾವು ತಿಳಿದುಕೊಳ್ಳಬೇಕು. ಅನೇಕ ಕಡೆ ಮಂತ್ರಿಗಳು, ಚೀಫ್ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್ ಹೇಳುತ್ತಾರೆ. ಸರ್ಕಾರಿ ಕಛೇರಿಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಕೆಲಸ ಇಲ್ಲದೆ ಕೂತಿದ್ದಾರೆ. ಎಂದು. ಇನ್ನೊಂದು ಕಡೆ ರಿಟ್ರೆಂಡ್ ಆಫೀಸರ್ಸ್ ಡೆಪ್ಯೂಟಿ ಕಮೀಷನರ್, ಡಿ. ಎಸ್. ಪಿ. ಅಂಥಹವರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತಾ ಹೋಗುವುದು ಸರಿಯಲ್ಲ. ಅಂಥಹವರನ್ನು ದೊಡ್ಡ ದೊಡ್ಡ ಉದ್ಯೋಗಗಳಿಗೆ ಪುನಃ ಸೇರಿಸಿಕೊಂಡು ಸಾವಿರಾರು ರೂಪಾಯಿ ಸಂಬಳ ಕೊಡುವುದು ಸರಿಯಲ್ಲ. ಅಂತಹವರಿಗೆ ನೌಕರಿ ಕೊಡುವ ಬದಲು, ಉದ್ಯೋಗ ಇಲ್ಲದೆ ಇರುವವರನ್ನು, ಶಿಕ್ಷಣ ಪಡೆದವರನ್ನು ಏತಕ್ಕೆ ತೆಗೆದುಕೊಳ್ಳಬಾರದು? ಈ ರೀತಿ ಎಕ್ಸ್‌ಟೆನ್‌ಷನ್‌ನ್ನು ಸರ್ಕಾರದವರು ಕೊಡಬಾರದು ಅದರ ಬದಲು ಹೊಸ ಹೊಸ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವುದು ಒಳ್ಳೆಯದು. ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡುವುದು ಸರಿಯಲ್ಲ. ಅವರು ಲಕ್ಷಾಂತರ ರೂಪಾಯಿ ಹಾಕಿ ಬೆಂಗಳೂರಿನಲ್ಲಿ ಮನೆ ಕಟ್ಟಿಕೊಂಡಿದ್ದರೂ ಕೂಡ ಅವರಿಗೆ ಇನ್ನೂ ಹೆಚ್ಚು ಹೆಚ್ಚಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದು ಸರಿಯಲ್ಲ.

2-30 P.M.

ಬೆಂಗಳೂರಿನಲ್ಲಿ ನನ ಮನೆಯ ಸಮೀಪದಲ್ಲೇ ಕೆಲವು ಜನರು ಬೀದಿ ಭಿಕಾರಿಗಳಾಗಿ ಬೀದಿಯಲ್ಲಿ ಎಸೆದ ಎಂಜಲು ಎಲೆಗಳಿಂದ ತಿನ್ನುತ್ತಿದ್ದುದನ್ನು ನೋಡಿ ನಮಗೆ ಬಹಳ ಸಂಕಟವಾಯಿತು. ಹೀಗೆ ಬೆಂಗಳೂರು ನಗರದಲ್ಲೇ ಇಷ್ಟು ಹೀನ ಸ್ಥಿತಿಯಲ್ಲಿರುವ ಜನರ ಬಗ್ಗೆ ನಾವು ಏನಾದರೂ ಒಂದು ವ್ಯವಸ್ಥೆ ಮಾಡಿ ಇವರೆಲ್ಲರಿಗೂ ಉದ್ಯೋಗವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಲಕ್ಷಾಂತರ ರೂಪಾಯಿಗಳ ಖರ್ಚು ಮಾಡಿ ಯಾರಿಗೂ ಸರಿಯಾದ ಉದ್ಯೋಗವನ್ನು ಕೊಡುವುದಕ್ಕೆ ಆಗದಿದ್ದರೆ ಇದು ಸಮಾಜವಾದವಾಗುವುದಿಲ್ಲ. ಇದನ್ನು ತಪ್ಪಿಸಬೇಕು. ನಿಜವಾಗಿಯೂ ಜನರಿಗೆ

(ಶ್ರೀ ಎ. ಆರ್. ಪುಟಗಾವಿ)

ಪೂರ್ಣವಾದ ಉದ್ಯೋಗವನ್ನು ಒದಗಿಸಿ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮ ಭಾಗದಲ್ಲಿ ಫಾರೆಸ್ಟ್ ಲೇಬರು ಸೊಸೈಟಿ ಎಂದು ಮಾಡಿ ಇದರ ಮೂಲಕ ಕೂಲಿಕಾರರಿಗೆ ಕೆಲಸಗಳು ಸಿಗುವಂತೆ ಮಾಡುತ್ತಿದ್ದರು. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಕೆಲಸಗಳನ್ನು ಬರೀ ಕಂಟ್ರಾಕ್ಟುದಾರರು ಗಳಿಗೇ ಕೊಡುವುದಕ್ಕಿಂತ ಇಂಥ ಕೂಲಿ ಜನರ ಮೂಲಕ ಕೆಲಸಗಳನ್ನು ಮಾಡಿಸಿದರೆ ಅನುಕೂಲ ವಾಗುತ್ತದೆ. ಕಂಟ್ರಾಕ್ಟರುಗಳಿಗೆ ಲಾಭವಾಗುವುದಕ್ಕಾಗಿ ಕೆಲಸಗಳನ್ನು ಕೊಡುತ್ತಾರೆಯೇ ಹೊರತು ಕೂಲಿಗಾರರ ಸಂಘಟನೆ ಮಾಡಿಕೊಂಡು ಕೆಲಸ ಮಾಡುವ ಕೂಲಿಗಾರರುಗಳಿಗೆ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ. ಆ ರೀತಿ ಪ್ರೋತ್ಸಾಹ ಕೊಟ್ಟಿದ್ದರೆ ಇವರು ದಿನಕ್ಕೆ ಎರಡು ಮೂರು ರೂಪಾಯಿಗಳ ಕೂಲಿಯನ್ನು ಸಂಪಾದಿಸಿಕೊಂಡು ಜೀವನ ಮಾಡಲು ಅವಕಾಶವಾಗುತ್ತಿತ್ತು. ಇದನ್ನು ತಪ್ಪಿಸಿ ಲಕ್ಷಾಂತರ ರೂಪಾಯಿಗಳ ಕೆಲಸಗಳನ್ನೆಲ್ಲಾ ಕಂಟ್ರಾಕ್ಟರುಗಳ ಮೂಲಕವೇ ಮಾಡಿಸಿ ಅವರಿಗೆ ಲಾಭ ಸಂಪಾದನೆ ಮಾಡಿಕೊಳ್ಳಲು ಅವಕಾಶ ಮಾಡುತ್ತಿದ್ದಾರೆ. ರೇಬರು ಡಿಸ್‌ಪ್ಯೂಟ್ಸ್‌ಗಳು ಕೂಡ ನೂರಾರು ಆಗಿವೆ. ಬಹುತೇಕ ಬಡ ಜನರೇ ಎಲ್ಲ ಕಡೆಯೆಲ್ಲೂ ನಷ್ಟಕ್ಕೆ ಒಳಗಾಗಿರುತ್ತಾರೆ. ಕೂಲಿಕಾರ ಜನಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಯಾವ ರೀತಿಯ ಪ್ರೋತ್ಸಾಹ ದೊರಕಬೇಕೋ ಅದು ಸಿಗುತ್ತಿಲ್ಲ ಮತ್ತು ಎಲ್ಲ ಕಡೆಗಳಲ್ಲೂ ಉದ್ಯೋಗಗಳನ್ನು ಇಂತಹ ಕೂಲಿ ಕಾರ ಜನಗಳಿಗೆ ಒದಗಿಸಿ ಕೊಡುವುದು ಅವಶ್ಯವಿದೆ. ಸರಕಾರದ ವತಿಯಿಂದ ಆಗಿರುವ ಸಹಕಾರ ಸಂಘಗಳಲ್ಲಿ ಎಷ್ಟರಮಟ್ಟಿಗೆ ಕೈಗಾರಿಕೆಗಳು ಮುಂದುವರಿಯುತ್ತವೋ ಮತ್ತು ಇವರ ಕೈಯಲ್ಲಿ ಏನು ಮಾಡಲಾಗುತ್ತದೋ ಎಂಬುದನ್ನು ನನಗಂತೂ ಹೇಳಲು ಶಕ್ಯವಿಲ್ಲ. ಒಟ್ಟಿನಲ್ಲಿ ಈ ಇಲಾಖೆ ಯಲ್ಲಿ ಲಂಚಗೂಳಿತನ ಎನ್ನುವುದು ಬೆಳೆಯುತ್ತಾ ಬರುತ್ತಿದೆ. ಇನ್ನೂ ಇಂಜನೀಯರಿಂಗ್ ಗ್ರಾಜುಯೆಟ್‌ಗಳಿಗೆ ಹಾಗೂ ಡಿಪ್ಲೊಮಾ ಹೋಲ್ಡರುಗಳಿಗೆ ಉದ್ಯೋಗಗಳನ್ನು ಕೊಡಬೇಕು ಎಂದು ಇವ ರಿಗೂ ಕಂಟ್ರಾಕ್ಟ್‌ಗಳನ್ನು ಕೊಟ್ಟು ಕೆಲಸ ಮಾಡಬೇಕೆಂದು ಮಾಡಿದ್ದಾರೆ. ಆದರೆ ಇವರಿಗೆ ಸರಕಾರದ ಕಡೆಯಿಂದ ಎಲ್ಲ ರೀತಿಯಿಂದಲೂ ಯೋಗ್ಯವಾದ ಕೆಲಸವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇವರೆಲ್ಲರೂ ಕಂಟ್ರಾಕ್ಟ್‌ದಾರರಂತೆ ಕೆಲಸ ಮಾಡಬೇಕಾಗಿದೆ. ಇವರಿಗೆ ಇರಾಖೆಯಲ್ಲಿರುವ ಅಧಿಕಾರ ವರ್ಗದವರು ಹೊಂದಾಣಿಕೆಯಿಂದ ಇರುತ್ತಾರೋ ಹೇಗೋ ನನಗಂತೂ ಗೊತ್ತಿಲ್ಲ. ಅನೇಕ ಗಡಿಗಳಲ್ಲಿ ಅಗ್ರಿಕಲ್‌ಚರು ಗ್ರಾಜುಯೇಟ್‌ಗಳಿಗಾಗಿ ಭೂಮಿ ಕೊಟ್ಟು ಅವರು ತಮ್ಮ ವೃತ್ತಿಯನ್ನು ಅದರಲ್ಲಿ ಉಪಯೋಗ ಮಾಡಬೇಕೆಂದು ಮಾಡಿದ್ದಾರೆ. ಇದೇನೋ ಸರಿಯಾದ ಕೆಲಸ. ಅಗ್ರಿಕರ್‌ಚರಲ್ ಗ್ರಾಜುಯೇಟ್‌ಗಳಾಗಿ ಇರುವವರಲ್ಲಿ ಕೆಲವರು ಬಡವರಾಗಿರುತ್ತಾರೆ. ಇವರಿಗೆ ಭೂಮಿ ಸಿಗುವುದು ಎಂದರೆ ಕಷ್ಟ ಇದಕ್ಕಾಗಿ ಸರಕಾರವೇ ಮುಂದೆ ಬಂದು ಜಮೀನುಗಳನ್ನು ಕೊಡುತ್ತಿರುವುದು ಯೋಗ್ಯವಾಗಿದೆ. ಇವರೆಲ್ಲರಿಗೂ ಭೂಮಿ ಯನ್ನು ಒದಗಿಸಿಕೊಟ್ಟು ಅವರ ಮುಖೇನ ಯೋಗ್ಯವಾದ ಕೆಲಸಗಳನ್ನು ಮಾಡಿಸುವುದು ಅವಶ್ಯಕ. ನಮಾಜಪರವಾದದ ಹಿತದೃಷ್ಟಿಯಿಂದ ಇಂತಹ ಕೆಲಸಗಳನ್ನು ಕೊಡುವುದು ಒಳ್ಳೆಯದು. ಇದು ಬಡ ಜನರಿಗೆ ಅತ್ಯಂತ ಅವಶ್ಯವಿದೆ. ಇದರ ಕಡೆಗೆ ಸರಕಾರ ಹೆಚ್ಚು ಲಕ್ಷ ಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Speaker Sir, I rise to oppose Demand No. 9, No. 11, No. 26, which are tabled by the Minister for Law, Labour and Parliamentary Affairs.

Sir, the Labour and Employment Department consists of a Labour Commissioner, in addition to him, there are three Deputy Labour Commissioners, and for every three districts, there is an Assistant Labour Commissioner. There is also other supervisory staff. I think 8-10 Labour Inspectors are working under the Labour Officer in a District and each Labour Inspector must inspect 2,500 shops. Sir, according to me, this is a heavy job for the Labour Inspectors and I request the Government to increase the supervisory staff under the Labour Officers because, they want to execute 19 Central Acts and 6 State Acts. There is the Agricultural Minimum Wages Act. Though

that Act is in force, it is not effectively implemented in Mysore State. So, I request the Hon. Minister to see that more Labour Inspectors are appointed for the effective implementation of all the Laws of labour.

Sir, there is the Employment Exchange in every district; particularly in Belgaum which is my district. Opportunities are given by thess officers only to Kannada people; though Maharashtrians are applying for the posts, they are not getting opportunities of employment. In the Employment Committee, the local Maharashtrian M.L.A.s are not appointed Sir. And I got the information from my friend Mr. Chandrakanth that, in Bidar also, there is an Employment Exchange Officer by name Sri S. B. Patil and there are so many allegations against that man. He had made so many allegations that he is corrupt, debaucherous and a drunkard. Though he was repeatedly asking the concerned Officers in Bidar that he must be transferred—he is from Gulbarga District—Government is shielding that man because he is by caste a Lingayat.

Sri G CHANDRAKANTH.—No, Sir, I have not said that, This is an addition to what I said.....

Sri B. B. SAYANAK.—I can also say how a Maharashtrian Labour officer is harassed in Belgaum. One Mr. N. G. Jadhaw who is a Labour Inspector was in Chikkodi as Labour Inspector; he was transferred to Belgum; after six months, he was again transferred to Hubli because he is a Maharashtrian. There is a general rule that if a man is transferred, he must be transferred on promotion and he should not be transferred on the same post within three years. I have tried my level best to have that transfer order cancelled. But that order was suspended and that order was sent after 8 days. By that he is troubled a lot.

Coming to the Administration of Justice, in Belgaum I should say for eight months, there was no Second Addl. Munsiff Court and the work was hampered. For 8 months, the Taluk Judicial First Class Magistrate was transferred to the Second Addl. Munsiff Court, Belgaum. And now the Taluka Judicial First Class Magistrate's court is vacant in Belgaum. Now the post of Taluka Judicial First Class Magistrate's court is vacant. There are so many cases pending in that court and parties are very much inconvenienced. So I request the Government to appoint Judicial Magistrates in such courts.

There is also a City Judicial First Class Magistrate's Court, but it has no building of its own. There is a litigation going on between the Government and the owner of the building in which the court is situated. The owner of the building says that he is not bound to carry out repairs to the building. The result is that in the rainy season when it rains heavily water pours down heavily and all the cases during that period have got to be adjourned. So like this for 3 months in the rainy Season. the coust has not done any work.

(SRI B. B. SAYANAK)

In my opinion the judiciary is not above corruption. When I attend the courts I find that even District Judges are coming late by half-an-hour. Even other Judges also are coming late. The judiciary which is the custodian of law, and its interpretation, must also respect law and the members of the judiciery must be in their offices in time. We expect the judiciary to be above corruption, but I am sorry to say that the judiciary in India, especially in Mysore State, is not above corruption. There are so many cases where parties have influenced the Judges and got judgments in their favour. I am of opinion that the Government must increase the salaries of High Court Judges, District Judges, Munsiffs, etc., so that they may not be corrupt. Only persons with merit should be appointed to such posts and not persons who try to get appointed by influence.

Regarding the courts at Khanapur and other places, there are no buildings constructed by Government for such courts. I request the Government to construct buildings for courts and also provide accommodation for persons coming to the courts from the mofussil places.

Regarding Parliament and State Legislatures, I am of opinion that the Upper House must be abolished. We are spending a lot of money on the Upper House. Punjab and West Bengal have already abolished their Upper Houses and Tamil Nadu also has decided to abolish its Upper House. Why not we in Mysore State also abolish our Upper House on which so much of money is wasted. The Upper House has no power to introduce the finance Bill. With these words, I thank the Chair.

Speaker's Ruling on the interpretation of Rule 289 of the Rules of Procedure

MR. SPEAKER.—Before calling upon the next hon. Member Sri Muniswamiah to speak, I would like to bring to the notice of the hon. Members Rule 289. The hon. Member Sri Sayanak called a particular officer corrupt and debaucherous and all that. Rule 289 says:

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply."

I request hon. Members to have the provisions of this Rule in mind and not make personal attacks on anybody without giving previous intimation.